ಒಬ್ಬ ಮಾನ್ಯ ಸದಸ್ಯರು.—ಇವತ್ತೇ ಹೇಗಾದರೂ ಮಾಡಿ ಅವಕಾಶ ಕೊಡಬೇಕು.

ಅಧ್ಯಕ್ಷರು.—ನೋಡಿ, ಕಾಲ ಮತ್ತು ಸಮಯದ್ರದಲೆಗಳು ಯಾರಿಗೂ ಕಾಯುವುದಿಲ್ಲ. ಆಯಿತು, ನೀವು ಏನು ನೋಟೀಸ್ ಕೊಟ್ಟಿದ್ದೀರೋ ಅದನ್ನು ನೋಡಿಸುತ್ತೇನೆ.

ವರದಿಯ ಮಂಡನೆ

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಈ ಮಾನ್ಯ ಸಭೆಯ ಮುಂದೆ ಡಿಸ್ಟ್ರಿಕ್ ರೀ ಆರ್ಗನೈಜೇಷನ್ ಮತ್ತು ತಾಲ್ಲೂಕು ರೀ ಆರ್ಗನೈಜೇಷನ್ ಮೇಲೆ ನೇಮಿಸಲಾಗಿದ್ದ ಹುಂಡೇಕಾರ್ ಕಮಿಟಿ ಮತ್ತು ಬಂಡೇಗೌಡ ಕಮಿಟಿ ರಿಪೋರ್ಟ್‌ಗಳನ್ನು ಇಡುತ್ತೇವೆ.

ಅಧ್ಯಕ್ಷರು.—ಮಂಡಿಸಿದ್ದು ಆಯಿತು. ನೋಡಿ, ಈಗ ಬೇರೆ ಸಬ್ಜೆಕ್ಟ್‌ಗೆ ಹೋಗಿಯಾಗಿದೆ. ಈ ವಿಷಯದ ಬಗ್ಗೆ ಮಾತನಾಡಲು ಮಧ್ಯದಲ್ಲಿ ನಿಮಗೆ ಅವಕಾಶ ಕೊಡುತ್ತೇನೆ, ಆಯಿತೇ ?

೯) ಅಲ್ಪ ಕಾಲಾವಧಿ ಮೇಲೆ ಚರ್ಚೆ

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಜನಾಂಗದವರ ಮೇಲೆ ದೌರ್ಜನ್ಯ ನಡೆದಿರುವುದು

೨-೦೦ ಪಿ. ಎಂ.

† ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರ ಮೇಲೆ ಇಡೀ ರಾಜ್ಯದಲ್ಲಿ ಏನು ದೌರ್ಜನ್ಯಗಳು ನಡೆದಿವೆ ಅದರ ಮೇಲೆ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆಂದು ಹೇಳಿ ಮೊನ್ನೆ ನಾನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದು ತಾವು ದೊಡ್ಡ ಮನಸ್ಸು ಮಾಡಿ ಇವತ್ತು ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ ಅದಕ್ಕಾಗಿ ತಮಗೆ ಪ್ರಥಮವಾಗಿ ಅಭಿನಂದಿಸುತ್ತೇನೆ. ಹತ್ತು ನಿಮಿಷದಲ್ಲಿ ಮುಗಿಸಿ ಅಂದರೆ ಕಷ್ಟವಾಗುತ್ತದೆ. ನಾನು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಈ ಸಮಸ್ಯೆ ಕೇವಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರಿಗೆ ಸಂಬಂಧಪಟ್ಟಿದ್ದರೂ ಕೂಡ ಇದರ ಪರಿಣಾಮ ಇಡೀ ಸಮಾಜದ ಮೇಲೆ ಬೀಳುತ್ತದೆ ಇಡೀ ದೇಶ ಶಾಂತಿಯನ್ನು ಕೆಲಕ್ಷತಕ್ಕಂತಹ ಹಾಗೂ ಅಶಾಂತಿಯನ್ನು ಉಂಟು ಮಾಡತಕ್ಕಂತಹ ಒಂದು ವಾತಾವರಣ ಆಗುತ್ತದೆ ಅನ್ನತಕ್ಕಂತಹ ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಮ್ಮ ದುರ್ದೈವ ನಮ್ಮ ಸಮಾಜದಲ್ಲಿ ಇಂತಹ ಒಂದೂ ಕೆಟ್ಟ ಪದ್ಧತಿಗಳನ್ನು, ಕೆಲವು ನಜಪಳಿಕೆಗಳನ್ನು ಸಾವಿರಾರು ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ, ಅದರೆ ಅದಕ್ಕೆ ಯಾವ ಸರಕಾರವೂ ಕೂಡ ಹೆಚ್ಚಿನ ಆಸ್ಥೆ ವಹಿಸಿ ಈ ಒಂದು ಸಮಾಜದವರಿಗೆ ಅನ್ಯಾಯವಾಗತಕ್ಕಂಥಾದ್ದನ್ನು ಮತ್ತು ಸಮಾಜದಲ್ಲಿರತಕ್ಕಂತಹ ಕೆಳ ಮಟ್ಟದ ಜನರ ಜೀವನವನ್ನು ಸುಧಾರಿಸತಕ್ಕಂಥಾದ್ದು ಅಥವಾ ಅವರನ್ನು ಮೇಲಕ್ಕೆ ತರಬೇಕೆನ್ನತಕ್ಕಂತಹ ವಿಷಯದ ಬಗ್ಗೆ ಕೆಲಸ ಮಾಡಿಲ್ಲ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಂತಹ ಸಮಸ್ಯೆಗಳ ಬಗ್ಗೆ ಯಾರಿಗೂ ಆಸಕ್ತಿಯಿರುವುದಿಲ್ಲ. ಏನೋ ಸಾಮ್ಮನೆ ಎಸ್.ಸಿ. ಎಸ್.ಟಿ ಜನಾಂಗದವರ ಉಟ್ಟಾಸಿಟಿ ಬಗ್ಗೆ ಚರ್ಚೆ ಎಂದು ಅವರಿಗೆ ಆಸಕ್ತಿ ಇಲ್ಲದೇ ಹೋಗಬಹುದು. ಈ ಒಂದು ಅನ್ಯಾಯ ಮತ್ತು ದಬ್ಬಾಳಿಕೆ ಜನತಾ ಸರ್ಕಾರ ಬಂದಮೇಲೆ ಹೆಚ್ಚಾಗಿದೆ ಅಂದರೆ ತಪ್ಪಾಗಲಿಕ್ಕಿಲ್ಲ: ನಾನು ಅಂಕಿ ಸಂಖ್ಯೆ ಆಧಾರದ ಮೇಲೆ ಹೇಳುತ್ತೇನೆ. ಅಂದರೆ ಹಿಂದೆ ಅನ್ಯಾಯಗಳು ಇರಲಿಲ್ಲವೇ ಎಂದು ಪ್ರಶ್ನೆ ಕೇಳಬಹುದು ಹಿಂದೆ ಅನ್ಯಾಯಗಳು ಆಗುತ್ತಿತ್ತು ಇಲ್ಲವೆಂದು ಅಲ್ಲ, ಆದರೆ ಸ್ವಲ್ಪ ಮಟ್ಟಿಗೆ ಹಿಡಿತಕ್ಕೆ ಬಂದಿತ್ತು. ಮುಖ್ಯವಾಗಿ ಮಾನ್ಯ ದೇವರಾಜ ಅರಸ್‌ರವರ ಸರಕಾರ ಇದ್ದಾಗ ಯಾರು ಅನ್ಯಾಯ ಮಾಡುತ್ತಿದ್ದರು, ಹಳ್ಳಿಗಳಲ್ಲಿ ಯಾರು ದಬ್ಬಾಳಿಕೆ ಮಾಡುತ್ತಿದ್ದರು, ಅವರಿಗೆ ಒಂದು ಭಯವಿತ್ತು. ನಾವು ಇವತ್ತಿನ ದಿವಸ ಅನ್ಯಾಯಗಳನ್ನು ಮಾಡಿದರೆ ಕೇಳತಕ್ಕಂತಹ ಜನ ಅಲ್ಲಿ ಇದ್ದಾರೆ ನಮ್ಮನ್ನು ಕಿವಿ ಹಿಂಡತಕ್ಕಂತಹ ಜನ ಇದ್ದಾರೆ

ಅನ್ನತಕ್ಕಂತಹ ಭಯ ಆ ಸಮಯದಲ್ಲಿ ಅಂದರೆ ೧೯೮೩ರಲ್ಲಿ ಇತ್ತು: ಆದರೆ ಈಗ ಏನಾಗಿದೆ ಅಂದರೆ ಅಧಿಕಾರದಲ್ಲಿ ಬಂದಂತಹ ಜನರ ಒಂದು ಸಪೋರ್ಟಿನಿಂದಲೋ ಅಥವಾ ಸಹಕಾರದಿಂದಲೋ ಏನಾದರೂ ಆಗುತ್ತಿದೆಯೋ ಎಂದು ಭಾಸವಾಗುತ್ತದೆ. ಇದು ಏನಾಗಿದೆ ಎಂದರೆ ಒಂದು ವಾತಾವರಣ ಬದಲಾವಣೆಯಾಗಿದೆ. ಏನು ವಾತಾವರಣ ? ಅನೇಕ ಬಲಿಷ್ಟವಾದಂಥ ಕೋಮಿನವರು ಹಳ್ಳಿಗಳಲ್ಲಿ ಎಲ್ಲೆಲ್ಲಿ ಅನ್ಯಾಯವನ್ನು ಇಲ್ಲಿಯವರೆಗೂ ಮಾಡಿಕೊಂಡು ಬಂದಿದ್ದಾರೆ, ಅವರ ಭಾವನೆ ಏನಾಗಿದೆ ಎಂದರೆ ಇತ್ತು ಇರತಕ್ಕಂಥ ಸರ್ಕಾರ ನಮ್ಮ ರಕ್ಷಣೆಗಿದೆ. ನಮಗೆ ಸಹಾಯ ಮಾಡತಕ್ಕಂಥ ಸರ್ಕಾರ ಎಂದು ತಿಳಿದುಕೊಂಡಿದ್ದಾರೆ ನಾವು ಯಾವುದೇ ಒಂದು ದಲಿತರ ಮೇಲೆ ಅಥವಾ ವೀಕರ್ ಸೆಕ್ಷನ್‌ನವರ ಮೇಲೆ, ಬಡವರ ಮೇಲೆ ಏನೂ ಮಾಡಿದರೂ ಕೂಡಾ ಅದು ನಡೆಯುತ್ತದೆ ಎನತಕ್ಕಂಥ ಒಂದು ವಾತಾವರಣ, ಭಾವನೆ ನಮ್ಮ ರಾಜ್ಯದಲ್ಲಿ ಸೃಷ್ಟಿಯಾಗಿದೆ. ಇವತ್ತು ಎಲ್ಲಾ ಕಡೆಯೂ ಇದೇ ರೀತಿ ಆಗಿದೆ. ಪೇಪರ್ ತೆಗೆದುನೋಡಿದರೆ ಕನಿಷ್ಟಪಕ್ಷ ಒಂದಾದರೂ ಒಂದು ಇನ್ಸಿಡೆಂಟ್ಸ್ ನಾವು ಕಾಣುತ್ತಿದ್ದೇವೆ. ಒಂದಂಕಡೆ ಹರಿಜನರ ಮೇಲೆ ದೌರ್ಜನ್ಯ, ಬಹಿಷ್ಕಾರ, ಹೋಟೆಲ್‌ನಲ್ಲಿ ಚಹಾ ಕುಡಿಯಂವುದಕ್ಕೆ ಅವಕಾಶ ಕೊಡದಿರಂವುದು, ಶಾಲೆಯಲ್ಲಿ ಪ್ರವೇಶ ಕೊಡದಿರುವುದು, ಒಂದಲ್ಲ ಹತ್ತಾರು ಪ್ರಕರಣಗಳಿವೆ. ಇನ್ನೊಂದು ಕಡೆ ಹೊಲದಲ್ಲಿ ಬೆಳೆದಂಥ ಕಬ್ಬನ್ನು ತೆಗೆದುಕೊಂಡು ಅವನನ್ನು ಓಡಿಸಿಬಿಡತಕ್ಕಂಥದ್ದು. ಇಂತಹ ನೂರಾರು ಪ್ರಕರಣಗಳನ್ನು ನಾವು ಕಾಣಬಹುದು. ಈ ವಾತಾವರಣ ಏತಕ್ಕೆ ಹೀಗೆ ಆಗಿದೆ? ಇದಕ್ಕೆ ಮುಖ್ಯವಾಗಿ ಸರ್ಕಾರದಲ್ಲಿ ಇರತಕ್ಕಂಥ ಜನರ ಬೆಂಬಲ ಅಥವಾ ಸರ್ಕಾರದವರು ಅಲಕ್ಷ್ಯ ಮಾಡಿ, ನಿರ್ಲಕ್ಷ್ಯದಿಂದ ನೋಡಿದ ಕಾರಣ ಇವತ್ತಿನ ದಿವಸ ಈ ಪರಿಸ್ಥಿತಿಯನ್ನು ಹಳ್ಳಿಗಳಲ್ಲಿ ನಾವು ಕಾಣುತ್ತಿದ್ದೇವೆ. ಹೆಚ್ಚಿನ ರೀತಿಯಲ್ಲಿ ಅದು ಆಗುತ್ತಿದೆ. ಹಿಂದೆ ನಾವು ಕೇಳಿದ್ದೇವೆ. ಮನು ಎಂಬುವನು ಒಂದು ಶಾಸ್ತ್ರವನ್ನು ಬರೆದನು. ಮನುಸ್ಮೃತಿ ಪ್ರಕಾರ ಕೆಲವೇ ಜನ ವಿದ್ಯಾಭ್ಯಾಸ ಮಾಡಬೇಕು, ಕೆಲವು ಜನ ಯುದ್ಧ ಮಾಡಬೇಕು, ಕೆಲವು ಜನ ವ್ಯಾಪಾರವನ್ನು ಮಾಡಬೇಕು, ಇನ್ನು ಮಿಕ್ಕವರು ಜನರ ಸೇವೆ ಮಾಡಬೇಕು, ಎನ್ನುವಂಥ ಒಂದು ಪರಿಸ್ಥಿತಿ ಇತ್ತು ಎನ್ನುವುದನ್ನು ನಾವು ನೋಡಿದ್ದೇವೆ. ಈಗಂತೂ ಪ್ರಾಪ್ರಭುತ್ವ ಬಂದಮೇಲೆ.....

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೇ, ಕೋರಂ ಇಲ್ಲ.

ಉಪಾಧ್ಯಕ್ಷರು.—ಕೋರಂ ಇದೆ. ದಯವಿಟ್ಟು ಕೂಡಿ ತಾವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಿಂದೆ ಆ ತರಹ ಪರಿಸ್ಥಿತಿ ಇತ್ತು. ಬಹುಶಃ ಸ್ವಾತಂತ್ರ್ಯ ಬಂದಮೇಲೆ ಈ ಪರಿಸ್ಥಿತಿ ಬದಲಾವಣೆಯಾಗುತ್ತದೆ. ಮತ್ತು ಈ ಪರಿಸ್ಥಿತಿ ಆಗಬೇಕಾದರೆ ಪ್ರಜಾಪ್ರಭುತ್ವದಲ್ಲಿ ಈ ಜನಾಂಗಕ್ಕೆ ರಕ್ಷಣೆ ಸಿಗುತ್ತದೆ ಮತ್ತು ಈ ಜನರ ರಕ್ಷಣೆ ಯಾವುದೇ ಸರ್ಕಾರ ಬಂದರೂ ಕೂಡಾ ಮಾಡುತ್ತದೆ ಎನ್ನತಕ್ಕಂಥ ನಂಬಿಕೆಯನ್ನು ಜನ ಇಟ್ಟುಕೊಂಡಿದ್ದರು. ಆದರೆ ಇವತ್ತು ಮುಖ್ಯವಾಗಿ ಈ ಸರ್ಕಾರ ಬಂದಮೇಲೆ ಇನ್ನೂ ಹೆಚ್ಚಿನ ರೀತಿಯಲ್ಲಿ ಅವರ ಮೇಲೆ ದಬ್ಬಾಳಿಕೆ ಮಾಡತಕ್ಕಂಥದ್ದು, ದಬ್ಬಾಳಿಕೆಯಾದರೂ ಕೂಡಾ ಇದೇ ಸರ್ಕಾರದ ಪೋಲೀಸ್ ಅಧಿಕಾರಿಗಳು ಅವರ ಕಡೆ ನೋಡದೆ ಇರತಕ್ಕಂಥದ್ದು ಆ ಕಡೆ ಅಲಕ್ಷ್ಯ ಮಾಡತಕ್ಕಂಥದ್ದು, ಅವರಿಗೆ ರಕ್ಷಣೆ ಕೊಡದೇ ಇರತಕ್ಕಂಥದ್ದು, ನಡೆಯುತ್ತಿದೆ, ಇದನ್ನು ನೋಡಿದರೆ ನಿಜವಾಗಲೂ ನನಗೆ ಬಹಳ ದುಃಖವಾಗುತ್ತದೆ. ಇಷ್ಟೆಲ್ಲಾ ಆದರೂ ಕೂಡಾ ಅದನ್ನು ನಿವಾರಣೆ ಮಾಡಲಿಕ್ಕೆ ಸರ್ಕಾರ ಏತಕ್ಕೆ ಮನಸ್ಸು ಮಾಡುತ್ತಿಲ್ಲ ? ಅಧ್ಯಕ್ಷರೇ, ನಾನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಮೂಲಕ ಒಂದು ಉದಾಹರಣೆಯನ್ನು ಇದೇ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದೆ. ಬೆಳಗಾಂ ಹತ್ತಿರ ಬೆಂಡಿಗೇರಿ ಎಂಬುದು ಒಂದು ಗ್ರಾಮ. ಆ ಗ್ರಾಮದಲ್ಲಿ ಆಗಿದ್ದು ಏನು ? ಏರಡನೇ ತಾರೀಖು ಆ ಹಳ್ಳಿಯಲ್ಲಿ ಕಲ್ಲಪ್ಪ, ಯಲ್ಲಪ್ಪ, ತಳವಾರ ಅವನು ಗುರುಪಾದಪ್ಪ ಎಂಬುವನ ಹೊಲದಲ್ಲಿ ಜಾನುವಾರು ಹೋಗಿ ಮೇಯ್ದು ಬಂದಿದ್ದಕ್ಕೆ ಅವನನ್ನು ಹಿಡಿದುತಂದು ಮೊದಲು ಹೊಡೆದರು.

ಅವನನ್ನು ಹೊಡೆದ ಮೇಲೆ ಅವನಿಗೆ ಏನು ಹೇಳಿದರು ಅಂದರೆ ನಿನ್ನ ದನಗಳು ನನ್ನ ಹೊಲದಲ್ಲಿ ಬಂದು ನಾಶ ಮಾಡಿದೆ. ನೀನು ಇಷ್ಟು ಹಣ ಕೊಡಲೇಬೇಕು. ಲುಕ್ಸಾನು ಕೊಡದೇ ಇದ್ದರೆ ನಿನಗೆ ನಾನು ಶಿಕ್ಷೆ ಕೊಡಬೇಕಾಗುತ್ತದೆ, ನಾನು ಹೇಳಿದಂತೆ ಶಿಕ್ಷೆ ಅನುಭವಿಸಬೇಕಾಗುತ್ತದೆ. ಅವನ ಮೇಲೆ ಸಾಹುಕಾರರ ಜನ ಗಂಗಪ್ಪನಿಗೆ ಬೆದರಿಸಿದರು. ಅವನು ತಪ್ಪು ಆಗಿದೆ, ಕ್ಷಮಿಸಿ. ಏಕೆಂದರೆ ದನಗಳು ಎಲ್ಲಿಗಾದರೂ ಹೋಗುತ್ತವೆ. ಏನೋ ತಪ್ಪು ಹೋಗಿದೆ, ನಮ್ಮ ಹುಡುಗ ನೀರಂ ಕುಡಿಯುವುದಕೆ ಹೋದಾಗ ಇದು ನಡೆದಿದೆ ಎಂದು, ಅದಕ್ಕಾಗಿ ಅವನು ಕ್ಷಮಾಪಣೆಯನ್ನು ಕೇಳಿದರೂ ಕೂಡ ಕೇಳಲಿಲ್ಲ.

ಕೊನೆಗೆ ಏನು ಮಾಡಿದರು ಅಂದರೆ ಗಂಗಪ್ಪನನ್ನು ಹಿಡಿದುಕೊಂಡು ಬಂದಿದ್ದು ಅಲ್ಲವೇ ಉಳಿದ ಇಬ್ಬರನ್ನು ಸಂಘಟಿತರಾಗಿ ಹಿಡಿದುಕೊಂಡು ಒಂದು ಪಂಚಾಯ್ತಿ ಮಾಡಿ, ಆ ಪಂಚಾಯ್ತಿಯಲ್ಲಿ ಏನು ತೀರ್ಮಾನ ಮಾಡಿದರು ಅಂದರೆ ಅವನಿಗೆ ಅಮಾನುಷವಾಗಿ ಒಂದು ಶಿಕ್ಷೆಯನ್ನು ಕೊಡುವಂತಹ ಪ್ರಯತ್ನ ನಡೆಯಿತು. ಏನು ಮಾಡಿದರು ಅಂದರೆ ನಿಮ್ಮ ದನಗಳು ಬೆಳೆಯನ್ನು ನಾಶಪಡಿಸಿದ್ದಕ್ಕಾಗಿ ನೀವು ಮನುಷ್ಯರ ಮಲವನ್ನು ತಿನ್ನಬೇಕು ಎಂದು ಳ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನರನ್ನು ಅಲ್ಲಿ ಸೇರಿಸಿ ಪಂಚಾಯ್ತಿ ಮಾಡಿ ಶಿಕ್ಷೆಯನ್ನು ಕೊಟ್ಟರು. ಪೋಲೀಸರು ಇವನ ಮೇಲೆ ಕೇಸ್ ಮಾಡುವುದಕ್ಕೆ ಹೋಗಲಿಲ್ಲ. ಗಂಗಪ್ಪನನ್ನು ಕೌಂಟರ್ ಕೇಸ್ ಮಾಡಿ ಕಳ್ಳತನದ ಆಪಾದನೆ ಮಾಡಿದರು. ಒಂದೇ ತಪ್ಪು ಮಾಡಿದ ಕಾರಣವಾಗಿ ಸವರ್ಣೀಯರು ಸೇರಿ ಮನುಷ್ಯರ ಮಲವನ್ನು ತಿನ್ನಿ ಎಂದು ಹೇಳಿ ತಿನ್ನಿಸಿದರು. ಹೌದು ಈ ಪ್ರಕರಣ ನಡೆದಿದೆ ಎಂದು ಮಾನ್ಯ ಸಚಿವರಾದ ಶ್ರೀ ಜೂಲಪ್ಪನವರು ಒಪ್ಪಿಕೊಂಡಿದ್ದಾರೆ. ಅಂದರೆ ಇಡೀ ಪ್ರಪಂಚದಲ್ಲಿ ಇಂತಹ ಶಿಕ್ಷೆ ಯಾರಿಗೂ ಕೊಟ್ಟಿಲ್ಲ. ಆದರೆ ಈ ರಾಜ್ಯದಲ್ಲಿ ಈ ಸರ್ಕಾರದಲ್ಲಿ ಆ ಜನಾಂಗಕ್ಕೆ ಈ ರೀತಿಯ ಶಿಕ್ಷೆಯನ್ನು ಕೊಟ್ಟಿದ್ದಾರೆ. ಕೊಟ್ಟಮೇಲೆ ಅದರಿಂದ ಸಮಾಧಾನ ಆಗದೆ ಅಪ್ಪರ್ ಟೂ-ಡೇಸ್ ಕೌಂಟರ್ ಕೇಸ್ ಮಾಡಿ ಕಳ್ಳತನದ ಆರೋಪ ಮಾಡಿದ್ದಾರೆ. ಈ ಕಾರ್ಯಕ್ಕೆ ಪೋಲಿಸರ ಬೆಂಬಲ ಇದೆಯೆಂದು ಭಾವಿಸಬೇಕೋ ಅಥವಾ ಇಲ್ಲಪ್ಪೋ ಪೋಲೀಸರು ಯಾವ ಕ್ರಮ ತೆಗೆದುಕೊಂಡರೂ ಅಂದರೆ ಸುಮ್ಮನೆ ನಾವಂ'ಕಾವಾಸ್ತೆ ಕೇಸ್ ರಿಜಿಸ್ಟರ್ ಮಾಡಿದರು. ಎಂತಹ ಕೇಸ್? ಇವರ ಮೇಲೆ ೧೪೭, ೩೪೪, ೩೨೨, ೫೦೨ ಸೆಕ್ಷನ್ ಅಡಿಯಲ್ಲಿ ಕೇಸ್ ಹಾಕಿದರು. ಇವೆಲ್ಲಾ ಟೈಬಲ್ ಅಫೆನ್ಸ್. ಬೇಲ್ ಮೇಲೆ ಅವನನ್ನು ಬಿಡುಗಡೆ ಮಾಡಿದ್ದಾರೆ. ಅಂಥವರಿಗೆ ಗೂಂಡಾ ಆಕ್ಟ್ ಮೇಲೆ ಅಥವಾ ಬೇರೆ ಯಾವುದೇ ಒಂದು ಪ್ರಾವಿಷನ್ ಮೇಲೆ ಅರೆಸ್ಟ್ ಮಾಡಿ ಅವರನ್ನು ಬಿಡಬಾರದೆಂದು ಹೇಳುತ್ತೇನೆ.

ಶ್ರೀ ರಮೇಶ್ ಕುಮಾರ್.—ಸನ್ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದ ವಿಷಯ. ಸಾಮಾನ್ಯವಾಗಿ ಬಲಹೀನರ ಮೇಲೆ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಅಥವಾ ಇತರ ಇನ್ಯಾವುದೇ ಹಿಂದುಳಿದ ವರ್ಗದವರ ಮೇಲೆ ದೌರ್ಜನ್ಯ ಮಾಡತಕ್ಕದ್ದು ಕೆಲವರ ಹವ್ಯಾಸ. ಈ ಕಾರ್ಯವನ್ನು ಮಾಡುವವರು ಈ ಪಕ್ಷದವರು ಇರಬಹುದು, ಆ ಪಕ್ಷದವರು ಇರಬಹುದು, ಈ ಸರ್ಕಾರ, ಆ ಸರ್ಕಾರ ಮಾಡುತ್ತಿದೆ ಎಂದು ಹೇಳುತ್ತಿಲ್ಲ. ಇಂತಹ ಜನರಿಗೆ ಮಾತ್ರ ಯಾರಿಂದರೂ ಮಾಡುತ್ತಿರುತ್ತಾರೆ. ಮಲವನ್ನು ಕೂಡ ತಿನ್ನಿಸುತ್ತಾರೆ. ಇಂತಹ ಕೃತ್ಯಗಳನ್ನು ಎಸಗುವವರಿಗೆ ರಾಜಕೀಯ ಸಾಯತಕ್ಷದಿಂದ ಪೋಷಣೆ ಮತ್ತು ರಕ್ಷಣೆ ಕೊಡುತ್ತಿದ್ದಾರೆ. ಇಲ್ಲಿಂದ ಸಿಕ್ಕಿರಬಹುದು, ಅಥವಾ ಆ ಕಡೆ ಪಾಡತಕ್ಕದ್ದು ಇದೆ ಮಾನ್ಯ ಸದಸ್ಯರು ಈ ವಿಷಯವನ್ನು ಹೇಳಿದಾಗ ನನಗೆ ನಾಚಿಕೆಯಾಗುತ್ತದೆ. ಒಂದೊಂದು ಘಟನೆಗಳು ನಮ್ಮ ಕ್ಷೇತ್ರದಲ್ಲೂ ಕೂಡ ಇದೆ. ೮ ವರ್ಷಗಳಿಗೆ ಜಮೀನು ಮಂಜೂರು ಮಾಡಿಕೊಟ್ಟಿರ್ಪ ಪೆಡ್ಯೂಲ್ ಕ್ಯಾಸ್ಟ್‌ಗೆ ಅನ್ ಆಥರೈಸ್ಡ್ ಕಲ್ಟಿವೇಷನ್ ಮಾಡಿಸಿ ಅವರು ಬೆಳೆ ಬೆಳೆಯುತ್ತಾರೆ. ಅವರು ಬೆಳೆ ಬೆಳೆದ ತಕ್ಷಣ ಸವರ್ಣೀಯರು ದನಬಿಟ್ಟು ಅದನ್ನು ಮೇಯಿಸುತ್ತಾರೆ ಈ ಜನರು ಪೋಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಟ್ಟರೆ ಪೋಲೀಸ್ ಅಧಿಕಾರಿಗಳು ಏನು ಹೇಳುತ್ತಾರೆಂದರೆ, ನಿಮಗೆ ಜಮೀನು ಮಂಜೂರಾಗಿಲ್ಲ. ನಾವು ಏನು ಮಾಡುವುದಕ್ಕಾಗುತ್ತದೆ, ನಿಮ್ಮಲ್ಲಿ ದಾಖಲೆಗಳು ಏನಾದರೂ ಇದ್ದರೆ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ನಮ್ಮಲ್ಲಿ ದಾಖಲೆಗಳು ಬಡವರ ಪರವಾಗಿ ಎಲ್ಲಿರುತ್ತವೆ? ಬಡವರ ಪರವಾಗಿ ದಾಖಲೆಗಳು ಇಲ್ಲದ ಒಂದು ವ್ಯವಸ್ಥೆಯನ್ನು ನಾವು ಇವೊತ್ತಿಗೂ ಪಾಲಿಸುವುದಿಕೊಂಡು ಹೋಗುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ತಮಗೆ ಇನ್ನೊಂದು ಉದಾಹರಣೆ ಕೊಡಬೇಕಿಂದರೆ, ಈ ಬಡ ಜನರು ತೋಟಗಾರಿಕೆ ಇಲಾಖೆಯಿಂದ ಪಡೆದಂಥ ತೆಂಗಿನ ಗಿಡಗಳನ್ನು ತಮ್ಮ ಮನೆ ಮುಂದೆ ಹರಿಯುವಂತಹ ಕೊಚ್ಚೆ ನೀರಿನ ಪಕ್ಕ ನೆಟ್ಟು ಬೆಳೆಸುವುದನ್ನು ಸಹಿಸದ ಕೆಲವರು ಆ ಗಿಡಗಳನ್ನೇ ಕಿತ್ತು ಬಿಸಾಕಿರುವಂತಹ ಪ್ರಸಂಗಗಳು ಸಹ ಇವೆ. ಈ ಬಗ್ಗೆ ನಾನೇ ಪೋಲೀಸರಿಗೆ ದೂರು ಕೊಟ್ಟಿದ್ದೇನೆ, I am not trying to dilute what you are trying to tell. ಈ ಒಂದು ಕೆಲಸವನ್ನು ಯಾರೇ ಮಾಡಿದರೂ ತಪ್ಪಾಗುತ್ತದೆ. ಆದ್ದರಿಂದ ಈ ಒಂದು ಸಿದ್ಧಾಂತದಲ್ಲಿ ನಂಬಿಕೆ ಇರುವಂತಹ ನಾವು ನೀವು ಸೇರಿಕೊಂಡು ಅಂದರೆ ಎಲ್ಲಾ ರಾಜಕೀಯ ಪಕ್ಷಗಳವರೂ ಸೇರಿಕೊಂಡು ಇಂತಹ ಜನರ ವಿರುದ್ಧ ಅಂತರ ಯುದ್ಧವನ್ನು ನಡೆಸಬೇಕು, ಯಾರು ಇಂತಹ ತೊಂದರೆಗೆ ಒಳಗಾಗಿದ್ದಾರೆ, ಅಂತಹ ಜನರಿಗೆ ನಾವೆಲ್ಲರೂ ಸೇರಿಕೊಂಡು ರಕ್ಷಣೆ ಕೊಡಬೇಕು. ಇಂತಹ ಜನರ ಪರವಾಗಿ ನಾವು ವಕಾಲತ್ತು ನಡೆಸಬೇಕು. We should dedicate

ourselves to take these cases to its logical ends within our own political parties. Then only we can find a solution.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾನು ಈ ಬಡ ಜನರನ್ನು ಇವರು ಯಾವ ರೀತಿ ತೊಂದರೆಗೆ ಸಿಕ್ಕಿಸಿದ್ದಾರೆ ಮತ್ತು ಯಾವ ರೀತಿ ಇವರ ಮೇಲೆ ಕೌಂಟರ್ ಕೇಸ್ ಹಾಕಿದ್ದಾರೆಂಬುದನ್ನು ಹೇಳುತ್ತಿದ್ದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಕೊಟ್ಟ ಹೇಳಿಕೆ ಈ ರೀತಿ ಇದೆ.—

"ದಿನಾಂಕ ೫-೮-೧೯೮೭ರಂದು ೧೬-೩೦ ಘಂಟೆಗಳ ಸಮಯದಲ್ಲಿ ಬೆಂಡಿಗೇರಿಯ ನಿವಾಸಿ ಕಲ್ಲಪ್ಪ ಯಲ್ಲಪ್ಪ ತಳವಾರ ಎಂಬ ಹರಿಜನ ಬಾಗೇವಾಡಿ ಪೋಲೀಸ್ ಠಾಣೆಯಲ್ಲಿ ಗುರುನಾದಪ್ಪ, ಗಂಗಪ್ಪ, ಮೇಲ್ಡಿ ಮತ್ತು ಇತರ ೧೨ ಜನರಲ್ಲಿ ಫಿರ್ಯಾದಿ ಮತ್ತು ಇತರ ನಾಲ್ವರನ್ನು ೨-೮-೧೯೮೭ ರಂದು ರಾತ್ರಿ ೭-೩೦ರ ಸಮಯದಲ್ಲಿ ಬೆಂಡಿಗೇರಿಯ ಪಂಚಾಯತಿ ವಿಚಾರಣೆ ಸಮಯದಲ್ಲಿ ಅವರನ್ನು ಬೆದರಿಸಿ ಬಲತ್ಕಾರ ಮಾಡಿ ಫಿರ್ಯಾದಿ ಮತ್ತು ಇತರ ನಾಲ್ವರಿಗೆ ಮಲವನ್ನು ತಿನ್ನಿಸಿದರು, ಈ ಸಂಬಂಧದಲ್ಲಿ ಮೊಕದ್ದಮೆ ಯನ್ನು ದಾಖಲು ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಇದು ಪೋಲೀಸ್ ವರದಿ"

ಇಲ್ಲಿ ಹರಿಜನರನ್ನು ಇವರು ಯಾವ ರೀತಿ ತೊಂದರೆಗೆ ಸಿಕ್ಕಿಸಿದ್ದಾರೆಂಬುದನ್ನು ನಾವು ನೋಡ ಬೇಕಾಗಿದೆ. ಇಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸಿದ್ದರೆ ಪೋಲೀಸರು ಹರಿಜನರ ವಿರುದ್ಧ ಕೊಟ್ಟ ಕೌಂಟರ್ ಕೇಸ್‌ನ್ನು ರಿಜಿಸ್ಟರ್ ಮಾಡಿಕೊಳ್ಳುತ್ತಿರಲಿಲ್ಲ. ಇಲ್ಲಿ ಹೇಗಿದ್ದರೂ ಗುನ್ನೆ ನಂ. ೯೧/೮೭ರ ಪ್ರಕಾರ ಕೇಸ್ ದಾಖಲಾಗಿತ್ತು.

ಶ್ರೀ ಆರ್. ಎಲ್. ಜಾಲಪ್ಪ.—ಈ ಬೆಂಡಿಗೇರಿಯ ಪ್ರಕರಣದಲ್ಲಿ ಅನ್ಯಾಯ ನಡೆದಿದೆ ಎಂಬುದನ್ನು ನಾನು ಒಪ್ಪಿದ್ದೇನೆ. ನಮ್ಮ ನಾಗರೀಕ ಸಮಾಜದಲ್ಲಿ ಇಂಥಾದ್ದು ಆಗಬಾರದೆಂದು ಹೇಳಿದ್ದೇನೆ. ಇಂಥಾ ಪ್ರಕರಣದಲ್ಲಿ ನಾವೆಲ್ಲರೂ ತಲೆತಗ್ಗಿಸಬೇಕಾಗಿದೆ. ಈ ಬಗ್ಗೆ ೧೩ ಜನ ಅಪರಾಧಿಗಳನ್ನು ಬಂಧಿಸಿ ಅವರ ಮೇಲೆ ದೋಷಾರೋಪಣ ಪತ್ರವನ್ನು ದಾಖಲು ಮಾಡಲಾಗಿದೆ ಎಂದು ಹೇಳಿದ್ದೇನೆ. ಇವರನ್ನು ಕೋರ್ಟಿನ ಮುಂದೆ ಹಾಜರುಪಡಿಸಿದಾಗ, ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆಂದು ಸಹ ಹೇಳಿದ್ದೇನೆ. ಇಂತಹ ಜನರನ್ನು ರಾಜ್ಯದಿಂದ ಹೊರಗಡೆಗೋ ಅಥವಾ ಜಿಲ್ಲೆಯಿಂದ ಹೊರಗಡೆಗೋ ಸಾಗಿಸುವುದಕ್ಕೆ ಅವಕಾಶ ಇದೆಯೇ ಎಂಬುದನ್ನು ಪರೀಕ್ಷೆ ಮಾಡಿಸುತ್ತೇನೆ ಎಂದು ಸಹ ಹೇಳಿದ್ದೇನೆ. ಆದರೂ ಮಾನ್ಯ ಸದಸ್ಯರು ಕಳಿಪ ಹತ್ತು ನಿಮಿಷಗಳಿಂದ ಇದನ್ನೇ ಹೇಳುತ್ತಿದ್ದಾರೆ. ಇಲ್ಲಿ ಕೇಸ್ ದಾಖಲಾಗಿದೆ. ಇವಕ್ಕೆ ಕೌಂಟರ್ ಆಗಿ ಯಾರಾದರು ಕೇಸ್ ಕೊಟ್ಟರೆ ಅದನ್ನು ಸಹ ದಾಖಲು ಮಾಡಬೇಕಾಗುತ್ತದೆ. ಮುಂದೆ ಚಾರ್ಜ್‌ಷೀಟ್ ಹಾಕುವಾಗ ಏನಾಗುತ್ತದೆಂಬುದನ್ನು ನೋಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇಲ್ಲಿ ಗುನ್ನೆ ನಂ. ೯೧/೮೭ರಲ್ಲಿ ಕೇಸ್ ದಾಖಲಾಗಿರುವಾಗ ಮತ್ತೆ ಗುನ್ನೆ ಸಂಖ್ಯೆ ೯೨/೮೭ರ ಪ್ರಕಾರ ಕೌಂಟರ್ ಕೇಸ್‌ನ್ನು ದಾಖಲು ಮಾಡಿಕೊಳ್ಳುವ ಅಗತ್ಯ ವಾದರೂ ಏನಿತ್ತು? ಇಲ್ಲಿ ಸತ್ಯಾಂಶ ಏನಿದೆ ಎಂಬುದು ಹೊರಬರಬೇಕಾಗಿದೆ. ಇದೇ ಕಾರಣದಿಂದ ಒಂದು ಹೌಸ್ ಕಮಿಟಿಯನ್ನು ರಚನೆ ಮಾಡಿ ಎಂದು ನಾವು ಕೇಳಿದ್ದು. ಇಂತಹ ಒಂದು ಅಮಾನುಷ ಕೃತ್ಯ ಏತಕ್ಕೆ ನಡೆಯಿತು. ಇಂತಹ ಕೃತ್ಯವನ್ನು ಏತಕ್ಕೆ ಮಾಡಿದರು ಅನ್ನುವುದನ್ನು ಪತ್ತೆ ಮಾಡುವ ಸಲುವಾಗಿ ನೀವು ಒಂದು ಹೌಸ್ ಕಮಿಟಿಯನ್ನು ರಚನೆ ಮಾಡಿದರೆ ಸತ್ಯಾಂಶ ಏನಿದೆ ಎಂಬುದು ಹೊರ ಬರುತ್ತದೆ. ಸತ್ಯಾಂಶ ಹೊರ ಬಂದು ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಂಡರೆ ಬೇರೆ ಹಳ್ಳಿಗಳ ಜನರಿಗೆ ಹೆದರಿಕೆ ಹುಟ್ಟುತ್ತದೆ.

ಮತ್ತೆ ಎರಡನೆಯದಾಗಿ ಚಿಕ್ಕೋಡಿ ತಾಲ್ಲೂಕಿನ ಬಿದರನ ಹಳ್ಳಿಯ ವಿಚಾರದಲ್ಲಿ ಸಹ ನೀವು ವಿಷಯವನ್ನು ಡೈಲ್ಯೂಟ್ ಮಾಡಿ ಹೇಳಿದ್ದೀರಿ.

ಅಲ್ಲಿ ಏನಾಗಿದೆಯೆಂದರೆ ಯಾರೋ ಒಬ್ಬ ಕುಮಾರ ಎನ್ನತಕ್ಕಂಥ ಷೆಡ್ಯೂಲ್ ಕ್ಯಾಸ್ಟ್ ಹುಡುಗ, ಅವ ನಿಗೂ ಲಕ್ಷ್ಮೀಬಾಯಿ ಎನ್ನತಕ್ಕಂಥ ೧೬ ವರ್ಷ ಹುಡುಗಿಯ ಜೊತೆಯಲ್ಲಿ ಅನೈತಿಕ ಸಂಬಂಧ ಇತ್ತು ಎನ್ನತಕ್ಕಂಥ ಕಾರಣದಿಂದ ಅವರ ತಾಯಿಯನ್ನು ಕರೆದುಕೊಂಡು ಬಂದು ಅವರನ್ನು ಬೆತ್ತಲೆಪಾಡಿ ಬೀದಿಯಲ್ಲಿ ಮೆರೆಸಿದ್ದಾರೆ. ಬೀದಿಯಲ್ಲಿ ಮೆರೆಸಿದ ಮೇಲೆ, ಇದು ಅನ್ಯಾಯವಾಗುತ್ತದೆ ಎಂದು ಆ ಊರಿನ ಜನ, ಆ ಊರಿನ ಸಾಹುಕಾರರಿಗೆ ಕೇಳಿದರೆ, ಅದು ಯಾವರೀತಿ ಅನ್ಯಾಯವಾಗುತ್ತದೆ, ನಾನು

ತೋರಿಸುತ್ತೇನೆ ಎಂದು ಹೇಳಿ, ಆ ಮನೆಯ ಯಜಮಾನರಿಗೂ ಮತ್ತು ಮಕ್ಕಳಿಗೂ ಎಲ್ಲರಿಗೂ ಕೂಡ ಹೊಡೆದು ಓಡಿಸಿ, ಪುನಃ ಅವರ ಮೇಲೆ ಒಂದು ಕೇಸನ್ನು ರಿಜಿಸ್ಟರ್ ಮಾಡಿದ್ದಾರೆ. ಅಂದರೆ ಎಲ್ಲೆಲ್ಲಿ ಇವರು ಅನ್ಯಾಯ ಮಾಡುತ್ತಾರೋ ಇದು ಅನ್ಯಾಯ ಎಂದು ಹೋಗಿ ಪೋಲೀಸ್ ಸ್ಟೇಷನ್ ನಲ್ಲಿ ಕಂಪ್ಲೈಂಟ್ ಕೊಟ್ಟ ತಕ್ಷಣ ನೆಕ್ಸ್ಟ್‌ಡೇ ಅವರೂ ಒಂದು ಕೌಂಟರ್ ಕೊಡುವುದು. ಪೋಲೀಸರು ಏನು ಹೇಳುವುದು ಅಂದರೆ, ಏನು ಮಾಡುವುದು ಅವರ ಕಡೆಯಿಂದ ಒಂದು ಅಪ್ಲಿಕೇಷನ್ ಬಂದಿದೆ ಎಂದು ಹೇಳಿ ಕೇಸ್ ರಿಜಿಸ್ಟರ್‌ಮಾಡಿ, ಕೊನೆಗೆ ಇವರ ಮೇಲೆ ಅನ್ಯಾಯ ಆದದ್ದನ್ನು ತಪ್ಪಿಸುವುದಕ್ಕೋಸ್ಕರ ಅವರಿಗೆ ಹೇಳಿಬಿಡುವುದು ಅವರದೂ ಕೇಸ್ ತೆಗೆದು ಹಾಕುತ್ತೇವೆ, ನಿಮ್ಮದೂ ತೆಗೆದುಹಾಕುತ್ತೇವೆ, ಮನೆಗೆ ಹೋಗಿ ಎಂದಂ. ಕೊನೆಗೆ ಅವರ ಕೇಸ್ ಯಾವ ರೀತಿಯಾದರೂ ಸಡಿಲ ಮಾಡುವುದು. ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿದೆ, ಒಂದು ಹಳ್ಳಿಯಲ್ಲಿ ಯಾರೋ ವೀಕರ್ ಸೆಕ್ಷನ್ ಏನಂ ಇರುತ್ತಾರೆ, ದಲಿತರು ಏನು ಇರುತ್ತಾರೆ ಅವರಿಗೆ ವಾಯ್ಸ್ ಇರುವುದಿಲ್ಲ. ಅವರ ಪರವಾಗಿ ಹೇಳ ತಕ್ಕಂಥ ಎವಿಡೆನ್ಸ್ ಇರುವುದಿಲ್ಲ. ಆಗ ಅವರು ಕೊಟ್ಟಂಥ ಕಂಪ್ಲೈಂಟ್ ನಿಲ್ಲುವುದಿಲ್ಲ. ಅವರು ಕೊಟ್ಟಂಥ ಕಂಪ್ಲೈಂಟ್ ನಿಂತು ಪುನಃ ಇವರ ಮೇಲೇ ಶಿಕ್ಷೆ ಆಗತಕ್ಕಂಥ ಪರಿಸ್ಥಿತಿ ಬರುತ್ತದೆ. ನಾನು ಏಕೆ ಹೇಳುತ್ತಿದ್ದೇನೆಂದರೆ ಈ ಸರ್ಕಾರದಲ್ಲಿ ಸ್ವಲ್ಪ ಹೆಚ್ಚಾಗಿದೆ ಅಂದರೆ ತಮಗೆ ಸ್ವಲ್ಪ ಸಿಟ್ಟು ಬರುತ್ತಿದೆ. ಏಕೆಂದರೆ, ಅಲ್ಲಲ್ಲಿ ಮಾಡಿಸತಕ್ಕಂಥ ಪುಢಾರಿಗಳು ಏನಿದ್ದಾರೆ ಅವರಿಗೆ ಡೈರೆಕ್ಟಿಲ್ಲ, ಇನ್‌ಡೈರೆಕ್ಟಿಲ್ಲ ಈ ಸರ್ಕಾರದ ಸಪೋರ್ಟ್ ಸಿಗುತ್ತಾ ಇದೆ. ಇದನ್ನು ನಾನಂ ಹೇಳಬೇಕಾಗುತ್ತದೆ. ಆಗ ಏನಂ ಇತ್ತು ಅಂದರೆ, ಆಗಸ್ವಲ್ಪ ಹೆದರಿಕೆಯಾದರೂ ಇತ್ತು. ನಾನು ಎಷ್ಟೋ ಕಡೆ ಈ ಮಾತನ್ನು ಕೇಳಿದ್ದೇನೆ. ನನ್ನ ಪಕ್ಷಕ್ಕೋಸ್ಕರ ಕಿರೀಟ ಬರುವುದಿಲ್ಲ ಇದನ್ನು ಹೇಳಿದರೆ. ಹಳ್ಳಿಯಲ್ಲಿ ಯಾವ ಪುಟ್ಟಕ್ಕೆ ಹೋಗಿದ್ದಾರೆಂದರೆ ಯಾವುದಾದರೂ ಪಿಪ್ಪೆಗೊಬ್ಬರ ಅವರ ಮನೆಯಲ್ಲಿ ಇದ್ದರೆ ಸಾಹುಕಾರರು ಹೊಡಕೊಂಡು ಹೋಗಂತಾರೆ. ಆಗ ಏನ್ರಿ ಸಾಹುಕಾರರೇ, ನನ್ನದು ಏಕೆ ಈ ರೀತಿ ಮಾಡಿದಿರಿ ಅಂದರೆ, ಹೋಗೊ ಇಂದಿರಾಗಾಂಧಿ ಕಾಲ ಅಲ್ಲ ಇದಂ, ಇಂದಿರಾಗಾಂಧಿ ಸತ್ತು ಹೋದಳು ಎಂದು ಹೇಳತಕ್ಕಂಥ ಪರಿಸ್ಥಿತಿ, ಹಾಗೂ ಮಾತನ್ನು ನೀವು ಅನೇಕ ಕಡೆ ಕೇಳಿರಬಹುದು, ಈ ರೀತಿಯಾಗಿ ಪ್ರತಿಯೊಂದು ಹಳ್ಳಿಯಲ್ಲಿ ಈ ಒಂದು ಅನ್ಯಾಯ ನಡೆದಿದೆ. ಇದು ಚಿಕೋಡಿಯಲ್ಲಿನ ಡೆದಿದೆ ಇದು ಎರಡನೇ ಇನ್‌ಸ್ಟೆನ್ಸ್. ಇದಕ್ಕೂ ಉತ್ತರ ಕೊಟ್ಟಿದ್ದಾರೆ ಅನ್ಯಾಯವಾಗಿದೆಎಂದು ಎರಡನೇ ಇನ್‌ಸ್ಟೆನ್ಸ್ ಒಂದು ಕಡೆ ಆಯಿತು. ಮೂರನೆಯದು ಈ ಇನ್‌ಸ್ಟೆನ್ಸ್. ಅಂದರೆ ಪ್ರಿವೆಂಟ್ ಮಾಡತಕ್ಕಂಥ ಮೆಷರ್ಸ್‌ನ್ನು ನೀವು ಏಕೆ ತೆಗೆದುಕೊಳ್ಳುವುದಿಲ್ಲ ? ಇದರ ಬಗ್ಗೆ ರಿವ್ಯೂ ಮಾಡಿದ್ದೀರಾ ? ಎಷ್ಟು ಡಿಸ್ಟ್ರಿಕ್ಟ್ ಮಂತ್ರಿಗಳು ರಿವ್ಯೂ ಮಾಡಿದ್ದಾರೆ. ನಿಮ್ಮಲ್ಲಿ ಏರ್‌ಬಸ್ ಮಿನಿಸ್ಟ್ರಿ ಇದೆ, ಹಿಂ ಜನ ಮಂತ್ರಿಗಳು ಇದ್ದೀರಿ, ಯಾವ ಯಾವ ಜಿಲ್ಲೆಗಳಲ್ಲಿ ಆ ಜಿಲ್ಲಾ ಮಂತ್ರಿಗಳು ಈ ಅಟ್ರಾಸಿಟೀಸ್ ಆ ಹರಿಜನರ ಮೇಲೆ ಅನ್ಯಾಯಗಳು ಏನು ಆಗುತ್ತಿವೆ ಇದನ್ನು ತಡೆಗಟ್ಟಬೇಕಂ ಎಂದು ರಿವ್ಯೂ ಮಾಡಿದರೇ ಹೇಳಿ ಯಾರ್ಯಾರು ಜಿಲ್ಲಾ ಮಂತ್ರಿಗಳು ಇದ್ದೀರಿ ಅವರು ರಿವ್ಯೂಮಾಡಿ. ಈ ರೀತಿ ಆಗಿದ್ದು ಸರಿಯಿಲ್ಲ, ದೌರ್ಜನ್ಯ ಆಗಿದ್ದು ಸರಿಯಿಲ್ಲ ಎಂದು ಇದರ ಬಗ್ಗೆ ಹೇಳಿಕೆ ಕೊಟ್ಟಿದ್ದೀರಾ ? ಅನೇಕ ಕಡೆ ಭೇಟಿ ಕೂಡ ಕೊಟ್ಟಿಲ್ಲ. ಬೆಳಗಾಂ ಜಿಲ್ಲೆಯಲ್ಲಿ ಎರಡು ಇನ್‌ಸ್ಟೆನ್ಸ್ ಆಯಿತು. ಆ ಜಿಲ್ಲಾ ಮಂತ್ರಿಗಳು ಶ್ರೀ ಇನಾಂದಾರ್ ಇರಬಹುದು. ಅಥವಾ ಇನ್ಯಾರೋ ಇರಬಹುದು. ಆ ಸ್ಥಳಕ್ಕೆ ಭೇಟಿಕೊಟ್ಟು ಅಲ್ಲಿನ ಷೆಡ್ಯೂಲ್ ಕ್ಯಾಸ್ಟ್ ಜನರಿಗೆ ಏನಾದರೂ ಸಮಾಧಾನ ಹೇಳಿದ್ದೀರಾ, ಈ ರೀತಿ ಆಗಬಾರದು ಎಂದಂ ಹೇಳಿದ್ದೀರಾ ?

ಶ್ರೀ ಜಿ. ಬಸವಣ್ಣೆಪ್ಪ.—ನಾನಂ ಸಮಾಜ ಕಲ್ಯಾಣ ಮಂತ್ರಿ ಆದಮೇಲೆ ಈ ಹರಿಜನರ ಮೇಲೆ ಆರ್ಥಿಕ ಪ್ರಗತಿ ಬಗ್ಗೆ ಯಾಗಲಿ, ಇನ್ಯಾವುದರ ಬಗ್ಗೆಯಾಗಲಿ, ದೌರ್ಜನ್ಯಗಳ ಬಗ್ಗೆ ಆಗಲಿ ಅನೇಕ ಸಾರಿ ರಾಜ್ಯಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ರಿವ್ಯೂಮಾಡಿ ಸಿ. ಆರ್. ಇ ಸೆಲ್ ಏನಿದೆ, ಳ ವಿಭಾಗಗಳು ಏನಿವೆ ಅಲ್ಲಿ ಅವರನ್ನು ಕರೆದು ರಿವ್ಯೂ ಮಾಡಿದ್ದೇನೆ. ತಾವು ಹೇಳಿದಹಾಗೆ ಹೆಚ್ಚಾಗಿಲ್ಲ. ದೌರ್ಜನ್ಯಗಳ ಮಟ್ಟ ಇಳಿಮುಖವಾಗಿದೆಯೇ ಹೊರತು ಜನತಾ ಸರ್ಕಾರ ಬಂದಮೇಲೆ ಹೆಚ್ಚಾಗಿಲ್ಲ, ಅಂಕಿ ಅಂಶಗಳಿಂ ಇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆದಂ ಆಯಿತು. ಅವರು ಉತ್ತರದಲ್ಲಿ ಹೇಳಲಿ. ಈಗ ಕಡಿಮೆಯಾಗಿಲ್ಲ, ನಾನು ಸ್ವಲ್ಪ ಅಂಕಿ ಅಂಶಗಳನ್ನು ಕೊಡುತ್ತೇನೆ ಆಲ್ಲಿಯವರೆಗೆ ತಾಳಿ. ಇದು ಒಂದು ಇನ್‌ಸ್ಟೆನ್ಸ್ ಸಲ್ಲಿ ಆಯಿತು. ಅಲ್ಲಿ ಯಾವ ಮಂತ್ರಿಗಳು ಹೋಗಿದ್ದಾರೆ ? ನಾನಂ ಕೇಳುತ್ತೇನೆ. ಆಲ್ಲಿ ಹೋಗಿ ಕೇಳಿಕೊಂಡು ಬಂದರೆ ಒಪ್ಪುತ್ತೇನೆ. ಆ ಜಿಲ್ಲಾ ಮಂತ್ರಿಗಳು ಏಕೆ ಆಸಕ್ತಿವಹಿಸಿ ಮಾಡಲಿಲ್ಲ, ಏಕೆ ಕೇಳಲಿಲ್ಲ, ಏಕೆ ದೌರ್ಜನ್ಯ ನಡೆಯಿತು ಎಂದು ಕೇಳಲಿಲ್ಲ. ಇದು ಎರಡನೇ ಇನ್‌ಸ್ಟೆನ್ಸ್. ಮೂರ

ನೆಯದು, ಜೀವರ್ಗಿ ತಾಲ್ಲೂಕಿನಲ್ಲಿ ಕಾಸಾರ್ ಸಿರಸಗಿ ಎಂಬ ಹಳ್ಳಿಯಲ್ಲಿ ಬೂದೆವ್ವ ಎಂಬ ಹೆಣ್ಣು ಮಗಳು ಆಲ್ಲಿ ಆ ಹೆಣ್ಣುಮಗಳು ಏನು ತಪ್ಪು ಮಾಡಿದ್ದು ಅಂದರೆ, ನನ್ನ ಮಗನಿಗೆ ಹೊಡೆಯಬೇಡಿ ಎಂದು ಕೇಳಿದ್ದಾಳೆ. ಆ ಹಳ್ಳಿಯ ಸಾಹುಕಾರ ಮಂಡೇವಪ್ಪ ಎನ್ನುವವರ ದನಗಳು ಈ ಬೂದೆವ್ವನ ಹೊಲದಲ್ಲಿ ಬಂದಾಗ, ಸಾಹುಕಾರರೇ ನಮ್ಮ ಹೊಲದಲ್ಲಿ ನಿಮ್ಮ ದನಗಳನ್ನು ಬಿಡಬೇಡಿ ಎಂದು, ಹೇಳಿದ್ದಾರೆ. ನಮ್ಮದು ಸಣ್ಣ ಹೊಲ, ಇರುವ ಬೆಳೆಯನ್ನೆಲ್ಲಾ ಹಾಳು ಮಾಡುತ್ತೀರಿ ಎಂದು ೯-೧೦ನೇ ತರಗತಿಯಲ್ಲಿ ಓದುತ್ತಿರುವ ಮಕ್ಕಳು ಕೇಳಿದಾಗ, ಅವರನ್ನು ಚೆನ್ನಾಗಿ ಹೊಡೆದು ಊರೊಳಗೆ ಹಾಕಿದ್ದಾರೆ. ಈ ವಿಷಯ ತಿಳಿದು ಆ ಮಕ್ಕಳ ತಾಯಿ ಬೂದೆವ್ವ ಬಂದು ಸಾಹುಕಾರ್ರೆ ನೀವು ಏಕೆ ಹೀಗೆ ಮಾಡಿದಿರಿ, ನಮ್ಮ ಹೊಲಕ್ಕೆ ದನಗಳನ್ನು ಬಿಟ್ಟು ಮೇಯಿಸಿದ್ದಲ್ಲದೆ ಮಕ್ಕಳನ್ನು ಹೊಡೆದಿದ್ದೀರಿ ಎಂದು ಕೇಳಿದ್ದಕ್ಕೆ ನಿನಗೂ ಸೊಕ್ಕು ಬಂದಿದೆ ಎಂದು ಹೇಳಿ ನಾಲ್ಕು ಜನ ಸೇರಿ ಆಕೆಯನ್ನು ಕಲ್ಲಿನಿಂದ ಜಜ್ಜಿ ಸ್ಥಳದಲ್ಲಿಯೇ ಕೊಂದಿದ್ದಾರೆ. ಇದು ನಮ್ಮ ಮಾನ್ಯ ಧರ್ಮಸಿಂಗ್‌ರವರ ಕ್ಷೇತ್ರದಲ್ಲಿ ನಡೆದಿದೆ. ಈ ಘಟನೆಗೆ ಸಂಬಂಧಪಟ್ಟಂತೆ ಸಣ್ಣ ಪುಟ್ಟ ಆರೋಪಿಗಳು ಸಿಕ್ಕಿದ್ದಾರೆ. ಆದರೆ. ಮುಖ್ಯ ಆರೋಪಿ ಮಂಡೇವಪ್ಪ ಎನ್ನುವವರು ಇನ್ನೂ ಸಿಕ್ಕಿಲ್ಲ ಬಿಜಾಪುರ, ಗುಲ್ಬರ್ಗದಲ್ಲಿ ಬೇಲ್ ಪಡೆಯುವುದಕ್ಕಾಗಿ ಓಡಾಡುತ್ತಿದ್ದಾರೆ, ಬೇಲ್ ಪಡೆಯುವುದಕ್ಕೆ ಹೋದದಿವಸ ಹೋಟೆಲುಗಳಲ್ಲಿರುತ್ತಾರೆ. ಬೆಂಗಳೂರಿಗೂ ಬರುತ್ತಾರೆ. ಸೆಷನ್ ಕೋರ್ಟಿನಲ್ಲಿ ಬೇಲ್‌ಗಾಗಿ ಅರ್ಜಿ ಹಾಕಿದ್ದಾರೆ. ಫೋಲೀಸಿನವರ ಚಿಕಾವಣೆ ಇಲ್ಲದೆ ಅವರು ಹೇಗೇ ಓಡಾಡುತ್ತಾರೆ. ಪೋಲೀಸಿನವರ ಬೆಂಬಲ ಇಲ್ಲದೆ ಬೆಂಗಳೂರಿಗೆ ಹೇಗೆ ಬರುತ್ತಾರೆ ? ವಕೀಲರನ್ನು ಯಾವರೀತಿ ಭೇಟಿಯಾಗುತ್ತಾರೆ ? ಸರ್ಕಾರದ ಬೆಂಬಲ ಇಲ್ಲದೇ ಇದು ನಡೆಯುವುದಕ್ಕೆ ಸಾಧ್ಯವೇ ? ಈ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ದಿವಸ ಅಂದರೆ ಆಗಸ್ಟ್ ೧೫ನೇ ತಾರೀಖು ಅಲ್ಲಿ ಹರಿಜನ ಹೆಣ್ಣುಮಗಳೊಬ್ಬಳ ಕೊಲೆಯಾಯಿತು. ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿ ಬ್ರಿಟಿಷನವರಿಗೆ ಗುಲಾಮರಾಗಿದ್ದೆವು. ಈಗ ಕ್ಯಾಸ್ಟ್ ಹಿಂದೂಗಳಿಗೆ ಗುಲಾಮರಾಗಿದ್ದೇವೆ. ನಮ್ಮ ಪರಿಸ್ಥಿತಿ ಹಾಗೆ ಇದೆ. ಇಂದು ಕೂಡ ನಮ್ಮ ಬಿಡುಗಡೆಯಾಗಿಲ್ಲ ಬೀದಿಯಲ್ಲಿ ತಿರುಗಾಡುವಂತಿಲ್ಲ, ಹೋಟೆಲುಗಳಿಗೆ ಹೋಗುವಂತಿಲ್ಲ, ಸಾರ್ವಜನಿಕ ಬಾವಿಗಳಲ್ಲಿ ನೀರು ತರುವಂತಿಲ್ಲ, ಒಳ್ಳೆ ಬಟ್ಟೆ ಹಾಕಿಕೊಂಡು, ಸೂಟುಬೂಟು ಹಾಕಿ ಕೊಂಡು ಹೋಗುವಂತಿಲ್ಲ. ಈ ದೇಶಕ್ಕೆ ಸ್ವಾತಂತ್ರ್ಯ ಬಂದು ೪೦ ವರ್ಷಗಳ ಸಂದರ್ಭದಲ್ಲಿ, ವಿಜೃಂಭಣೆಯಿಂದ ಆಚರಿಸತಕ್ಕ ಕಾಲದಲ್ಲಿ ಅಲ್ಲಿ ಹೆಣ್ಣು ಮಗಳ ಕೊಲೆ ಮಾಡಲಾಗಿದೆ. ಮಂಡೇವ ಆರೋಪಿಯನ್ನು ಅರೆಸ್ಟ್ ಮಾಡತಕ್ಕ ಶಕ್ತಿ ಪೋಲೀಸಿನವರಿಗೆ ಇಲ್ಲವೇ ? ಈ ಸರ್ಕಾರಕ್ಕೆ ಇಲ್ಲವೇ ? ಮಾತೆತ್ತಿದರೆ ರಕ್ಷಣೆ ಕೊಡುತ್ತೇವೆಂದು ಹೇಳುತ್ತೀರಿ. ಯಾವರೀತಿಯ ರಕ್ಷಣೆ ಕೊಡುತ್ತಿದ್ದೀರಿ ? ಗುಲ್ಬರ್ಗ ಡಿವಿಜನ್‌ನಲ್ಲಿ ಡಿ. ಐ. ಜಿ. ಇದ್ದಾರೆ. ಎಸ್. ಪಿ. ಇದ್ದಾರೆ. ಕಾಸಾರ ಸರ್ಕಿಕ್ಕೆ ಜಾಗದಲ್ಲಿ ಇಂಥ ಪರಿಸ್ಥಿತಿ ಇದೆ ಎಂದರೆ, ಇಂಟೀರಿಯರ್ ಪ್ಲೇಸಿನಲ್ಲಿ ಇಂಥ ಘಟನೆ ನಡೆದರೆ, ತಹಶೀಲ್ದಾರರು, ಸಬ್‌ಇನ್ಸ್‌ಪೆಕ್ಟರ್ ಹೋಗದೇ ಇರುವ ಕಡೆ ಇಂಥ ಘಟನೆ ನಡೆದರೆ ಅಲ್ಲಿರುವ ಹರಿಜನರ ಪರಿಸ್ಥಿತಿ ಏನು ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಇದು ಕಾಸಾರ ಸರ್ಕಿಕ್ಕಿನಲ್ಲಿ ನಡೆದಂಥ ಮೊದಲನೇ ಘಟನೆ. ಆನೇ ಘಟನೆ ಮೆದಕಿನಾಳ, ಗಿಣಿಗೇರ ಹಾಗೂ ದುಮ್ಮಿ ಇವು ರಾಯಚೂರು ಜಿಲ್ಲೆಯ ಹಳ್ಳಿಗಳು. ಇಲ್ಲಿ ಹರಿಜನರು ಮಾಡಿದಂಥ ಅಪರಾಧ ಸರ್ಕಾರೀ ಜಮೀನಿನಲ್ಲಿ ಪ್ರವೇಶ ಮಾಡಿದ್ದು. ಇವರು ಬಡವರಾದ್ದರಿಂದ ಕಾನೂನು ಪ್ರಕಾರ ನಮಗೆ ಜಮೀನು ಸಿಗುತ್ತದೆಂದೂ ಪ್ರಯತ್ನ ಮಾಡಿದ್ದು. ಇದು ಎಲ್ಲಿಯವರೆಗೆ ಹೋಯಿತೆಂದರೆ, ಪ್ರಪಂಚದಲ್ಲಿ ಇಂಥ ಅಮಾನವೀಯ ಅಮಾನುಷ್ಯ ಕೃತ್ಯವನ್ನು ಎಲ್ಲೂ ಮಾಡಿಲ್ಲ. ಊರಿನ ಜನ ಹರಿಜನರಿಗೆ ಎಲ್ಲಿಯವರೆಗೆ ತೊಂದರೆ ಕೊಟ್ಟರು ಅಂದರೆ, ಹರಿಜನರನ್ನು ಬೇರೆಯವರು ಮಾತನಾಡಿಸಿದರೆ, ಹಿಟ್ಟಿನ ಗಿರಣಿಗೆ ಅವಕಾಶ ಕೊಟ್ಟರೆ, ನೀರು ಕೊಟ್ಟರೆ ೫೦೦ ರೂಪಾಯಿ ದಂಡ.

೨-೩೦ ಪಿ. ಎಂ

ಕ್ಯಾಸ್ಟ್ ಹಿಂದೂಸ್ ಅವರು ಹರಿಜನರ ಜೊತೆಗೆ ಮಾತನಾಡಿದರೆ ಅವನಿಗೆ ೫೦೦ ರೂಪಾಯಿ ದಂಡ ಇದು ಊರು ಜನರು ಸೇರಿ ವಿಧಿಸಿದಂಥ ದಂಡ. ಮುಂದೆ ಬಂದಿದ್ದನ್ನು ತಮ್ಮ ಗಮನಕ್ಕೆ ತರುತ್ತೇನೆ. ಲಿಂಗಸೂರು ತಾಲ್ಲೂಕು ಮೆದಕಿನಾಳ ಗ್ರಾಮದ ಹರಿಜನರೊಡನೆ ಗ್ರಾಮದ ಇತರರು ಜನರು ಮಾತನಾಡಿದರೆ ೫೦೦ ರೂಪಾಯಿ ದಂಡ ವಿಧಿಸಲಾಗುತ್ತದೆಂದು ವರದಿಯಾಗಿದೆ. ಈ ದಂಡ ವಿಧಿಸುವ ಕಾನೂನನ್ನು ಗ್ರಾಮದ್ವಿಸರ್ಜನೆಯಿಂ ನಾಯಕರು ಚಲಾಯಿಸುತ್ತಿದ್ದಾರೆ. ಈ ರೀತಿಯಾಗಿ ಬಂದಿದೆ.

ಯಾರಾದರೂ ನೀರು ತುಂಬಿಕೊಳ್ಳಲಿಕ್ಕೆ ಅವಕಾಶ ಮಾಡಿದರೆ, ಹಿಟ್ಟಿನ ಗಿರಣಿಯಲ್ಲಿ ಹಿಟ್ಟು ಬೀಸಲಿಕ್ಕೆ ಅವಕಾಶ ಮಾಡಿಕೊಟ್ಟರೆ ಒಂದು ಸಾವಿರ ರೂಪಾಯಿ ದಂಡ ಎಂದು ಹೇಳಲಾಗುವುದು ಪತ್ರಿಕೆಯಲ್ಲಿ ಬಂದಿದೆ. ಅದು ಶ್ರೀವಾನ್ ಬಸವರಾಜ್ ಪಾಟೀಲ್ರ ಕಾನ್ಸ್ಟಿಟ್ಯುಯೆನ್ಸಿನಲ್ಲಿ ಇರಬೇಕು. ಆ ಕಾನ್ಸ್ಟಿಟ್ಯುಯೆನ್ಸಿ ಮಂತ್ರಿಗಳು ಇದ್ದರೂ ಸಹ ಅದು ಎಲ್ಲಿಯವರೆಗೆ ನಡೆಯಿತು ಅಂದರೆ ಒಂದು ತಿಂಗಳವರೆಗೆ ನಡೆಯಿತು. ಒಂದು ಸಾರಿ ಮಾನ್ಯ ಬಸವಣ್ಣಪ್ಪನವರು ಆ ಸ್ಪಾಟ್ಗೆ ಹೋಗಿ ವಿಸಿಟ್ ಮಾಡಿಬಂದರು ಜನತಾಪಕ್ಷದ ಸರ್ಕಾರದಲ್ಲಿ ಫುಡ್ ಅಂಡ್ ಸಿವಿಲ್ ಸಪ್ಲೈ ಮಿನಿಸ್ಟರ್ ಆಗಿರುವಂತಹವರ ಊರಿನಲ್ಲಿ ಇದು ಆಗಿದ್ದರೆ ಇದನ್ನು ನಾವು ಯಾರಿಗೆ ಹೇಳಬೇಕು. ಸುಮಾರು ಒಂದೂವರೆ ತಿಂಗಳು ಆದಮೇಲೆ ದಲಿತಸಂಘರ್ಷ ಸಮಿತಿಯವರು, ವಿರೋಧಪಕ್ಷದ ನಾಯಕರು, ಶ್ರೀಮಾನ್ ಬಸವಣ್ಣಪ್ಪನವರು, ಒಂದು ಜನರು ಹೋಗಿ ಕೊನೆಗೆ ಸಮಾಧಾನ ಮಾಡಿದಮೇಲೆ ಈಗ ಸ್ವಲ್ಪ ಮಟ್ಟಿಗೆ ತಣ್ಣಗಾಗಿದೆ. ಈ ಜಿಲ್ಲಾಮಂತ್ರಿಗಳು ಏನು ಮಲಗಿದ್ದಾರಾ? ಇವರು ಏನು ಮಾಡಿದರು? ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ? ಸರ್ಕಾರ ಏನು ಮಾಡುತ್ತಿತ್ತು, ಹಾಗೂ ಅಧಿಕಾರಿಗಳು ಏನು ಮಾಡುತ್ತಿದ್ದರು? ಒಂದು ಕಡೆ ಪ್ರೋತ್ಸಾಹ ನೀಡುವುದು, ಇನ್ನೊಂದುಕಡೆ ಸರಿಪಡಿಸುತ್ತಿದ್ದೇವೆ ನಮ್ಮ ಕಾಲದಲ್ಲಿ ಕಡಿಮೆಯಾಗುತ್ತಿದೆ ಎಂದು ಹೇಳುವುದು. ಮಾತನಾಡಿದರೆ ೫೦೦ ರೂಪಾಯಿ ದಂಡ, ಹಿಟ್ಟಿನ ಗಿರಣಿಯಲ್ಲಿ ಹಿಟ್ಟು ಬೀಸಿದರೆ ೧೦೦೦ ರೂಪಾಯಿ ದಂಡ ಇನ್ನು ಗಿರಣಿಗೇರದಲ್ಲಿ ಇದೇ ರೀತಿ ಆಲ್ಲಿಯೂ ಕೂಡ ನಡೆದಿದೆ. ಸವರ್ಣೀಯರು ಡುಮಕಿ ಎನ್ನುವ ವಿಲೇಜ್‌ನ ಹರಿಜನರಿಗೆ ತೊಂದರೆ ಕೊಟ್ಟರು. ಮಾನ್ವಿ ತಾಲ್ಲೂಕಿನ ಡುಮಕಿಯಲ್ಲಿ ಒಬ್ಬ ಹರಿಜನ ಹೆಣ್ಣುಮಗಳನ್ನು ರೇಪ್ ಮಾಡಿದರು, ಆ ಭಾಗದಲ್ಲಿ ಹರಿಜನರಿಗೆ ಹೋಟಲಿನಲ್ಲಿ ಆಗಲಿ, ಕಿರಾಣಿ ಅಂಗಡಿಯಲ್ಲಿ ಆಗಲಿ ಸಾಮಾನು ಕೊಡುವುದಿಲ್ಲ ಎಂದು ಸುಮಾರು ೧೬ ದಿವಸದವರೆಗೆ ಸತಾಯಿಸಿದರು. ಕೊನೆಗೆ ಪೋಲೀಸ್ ಸೂಪರಿಂಟೆಂಡೆಂಟ್ ಅವರು, ಡಿ ಸಿ,ಯವರು ಯಾರು ಬಂದರೂ ಕೇಳಲಿಲ್ಲ. ಇತಕ್ಕೆ ಸ್ವಾಮಿ ಇದು? ಅವರೇನು ಮನುಷ್ಯರಲ್ಲವೇ? ಅವರ ಬಗ್ಗೆ ಅನುಕಂಪ ಬೇಡವೇ? ಅವರ ಮತ ತೆಗೆದುಕೊಳ್ಳುವುದಿಲ್ಲವೇನಾ ನೀವು? ರಕ್ಷಣೆ ಕೊಡುವಂಥ ಸಂದರ್ಭ ಬಂದರೆ ನಾವು ಅದನ್ನು ಮಾಡಿದ್ದೇವೆ, ಇದನ್ನು ಮಾಡಿದ್ದೇವೆ ಎಂದು ಹೇಳುತ್ತೀರಿ. ಅದೇ ಯಾರಾದರೂ ಶ್ರೀಮಂತರ ಮೇಲೆ ಅಥವಾ ದೊಡ್ಡ ಶ್ರೀಮಂತರ ಮೇಲೆ ಅನ್ಯಾಯ ಆದರೆ ಅಥವಾ ಅವರ ಬಗ್ಗೆ ಏನಾದರೂ ಅಪ್ಲಿಕೇಷನ್ ಬಂದರೆ ಟೆಲಿಫೋನ್ ಮಾಡಿದರೂ ತಕ್ಷಣ ನಿಮ್ಮ ಪೋಲೀಸ್ ವ್ಯಾನ್ ಹೋಗುತ್ತದೆ, ನಿಮ್ಮ ರಿಸರ್ವ್ ಪೋಲೀಸ್ ಅವರ ರಕ್ಷಣೆಗೆ ಹೋಗುತ್ತದೆ. ಅದೇ ಬಡವರು, ದುರ್ಬಲವರ್ಗದವರು, ಇವರುಗಳ ಬಗ್ಗೆ ಘೋಷಣೆ ಹೇಳುತ್ತೀರಿ, ಪದೇ ಪದೇ ನಾವು ನಿಮಗೆ ಇದನ್ನು ಮಾಡಿದ್ದೇವೆ, ಅದನ್ನು ಮಾಡಿದ್ದೇವೆಂದು ಹೇಳುತ್ತಿರುತ್ತೀರಿ. ಅವರ ಕಲ್ಯಾಣ ಕಾರ್ಯ ಮಾಡುತ್ತೇವೆ ಎನ್ನುವುದನ್ನು ಹೇಳಿ, ಅವರಿಗೆ ರಕ್ಷಣೆ ಮಾಡತಕ್ಕ ತಾಕತ್ತು ನಿಮ್ಮಲ್ಲಿ ಇಲ್ಲ ಅಂದರೆ ಈ ಸರ್ಕಾರ ಏತಕ್ಕೆ ಇರಬೇಕು? ನಿಮ್ಮ ಗಮನಕ್ಕೆ ಬಾರದೇ ಇದ್ದರೆ ಒಪ್ಪಿಕೊಳ್ಳುತ್ತೇನೆ, ನಿಮ್ಮ ಗಮನಕ್ಕೆ ಬಂದಮೇಲೆ ನಿಮಗೆ ಗೊತ್ತಿದ್ದರೂ ಕೂಡ ಅವರ ಹತ್ತಿರ ಹೋಗಿ ಮಾತನಾಡತಕ್ಕ ಸೌಜನ್ಯ ನಿಮಗೆ ಇಲ್ಲ ಅಂದರೆ ನಾವು ಏನು ಮಾಡಬೇಕು? ಮಾನ್ಯ ಬಸವರಾಜ್‌ಪಾಟೀಲ್ ಅವರು ಮಾನ್ವಿಯಿಂದ ಎಲೆಕ್ಟ್ ಆಗಿ ಬಂದಿದ್ದಾರೆ, ಅದೇ ರೀತಿ ಲಿಂಗಸೂರಿನಿಂದ ಮಾನ್ಯ ಅಮರಪ್ಪನಾಯಕ್ ಎಲೆಕ್ಟ್ ಆಗಿ ಬಂದಿದ್ದಾರೆ. ಅಂದಮೇಲೆ ನಿಮ್ಮ ಕೈಯಲ್ಲಿ ಅಧಿಕಾರ ಇಟ್ಟುಕೊಂಡು ಅಲ್ಲಿ ಆಗತಕ್ಕ ಅನ್ಯಾಯವನ್ನು ಏತಕ್ಕೆ ಬಗೆಹರಿಸಬಾರದು ಎಂದು ಕೇಳುತ್ತೇನೆ. ಇವರು ಊರಿಗೆ ಹೋಗುವುದಿಲ್ಲ ಅಂದರೆ ಈ ಸರ್ಕಾರ ಶ್ರೀಮಂತರ ಕೈವಾಡ, ದಬ್ಬಾಳಿಕೆ ಮಾಡತಕ್ಕವರ ಕೈಗೊಂಬೆಯಾಗಿದೆ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ. ಇದೂ ಅಲ್ಲದೆ ಗುಲ್ಬರ್ಗಾ ಜಿಲ್ಲೆಯ ಆಳಂದ್ ತಾಲ್ಲೂಕಿನಲ್ಲಿ ಕೂಡ ಇದೇ ರೀತಿಯ ಪ್ರಾರ್ಜನ್ಯ ನಡೆದಿದೆ. ಅದು ಏನೆಂದರೆ, ನಮ್ಮ ಕಡೆ ಕಾರು ಹಣ್ಣೆಮೆ ಅಂತ ಮಾಡುತ್ತಾರೆ. ಆ ದಿವಸ ಎತ್ತುಗಳನ್ನು ಓಡಿಸುತ್ತಾರೆ, ಕಾಂಪಿಟೇಷನ್ ಇರುತ್ತದೆ. ಈ ರೀತಿಯ ಕಾಂಪಿಟೇಷನ್ ನಡೆದಾಗ ಕೆಲವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರೂ ಕೂಡ ಅದರಲ್ಲಿ ಭಾಗವಹಿಸಬೇಕೆಂದು ಹೋದಾಗ ಅಲ್ಲಿ ಯಾರದೋ ಎತ್ತುಗಳು ಮುಂದೆ ಬಂದುವು ಎಂದು "ನೀನು ಏತಕ್ಕೆ ಬಂದೆ ನಿನ್ನ ಎತ್ತುಗಳನ್ನು ತಂದೆ? ಈ ಊರಿನ ಗೌಡನ ಎತ್ತುಗಳನ್ನು ಮೊದಲು ಹೋಗಬೇಕು, ತದನಂತರ ನೀನು ಹೋಗಬೇಕು. ಈ ಪದ್ಧತಿ ಈ ಊರಿನಲ್ಲಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ನೀನು ಮಾಡಿದ್ದು ತಪ್ಪು ಅಂತ ಅವನಮೇಲೆ ದೊಡ್ಡ ಜಗಳ ಆದಮೇಲೆ ಅವರ ಮನೆಗಳನ್ನು ಇವರು ಸುಟ್ಟು ತೊಂದರೆ ಮಾಡಿದರು. ಕೊನೆಗೆ ಪೋಲೀಸ್ ಫೈರಿಂಗ್ ಕೂಡ ಆಯಿತು. ಕೇವಲ ಇದೊಂದೇ ಘಟನೆ ಅಲ್ಲ-

ಇಂಥಾದ್ದು ನೂರಾರು ಘಟನೆಗಳು ನಡೆದಿವೆ ನಾನು ಅವುಗಳನ್ನು ಇವತ್ತು ಸಂಜೆಯವರೆಗೆ ಹೇಳಿದರೂ ಅದು ಕಡಿಮೆಯೇ ಆಗುತ್ತದೆ. ಆದರೆ ಇಂಥ ದೌರ್ಜನ್ಯಗಳು ಕಡಿಮೆಯಾತೆದೆ, ಕಡಿಮೆಯಾಗಿವೆ ಎಂದು ಹೇಳುತ್ತಿರುತ್ತೀರಿ, ನೋಡಿ, ಎಲ್ಲಿ ಕಡಿಮೆಯಾಗಿದೆ ಎಂದು. ಇದೇ ರೀತಿ ನಂಜನ ಗೂಡಿನಲ್ಲಿ ಕೂಡ ಒಂದು ಘಟನೆ ನಡೆಯಿತು. ತದನಂತರ ಸಾಲಿಗ್ರಾಮ, ಕೆ. ಆರ್. ನಗರದ ಉಳುವಿನ ಹುತ್ತ, ಇನ್ನೂ ಮುಂತಾದ ಕಡೆಗಳಲ್ಲಿ ದೌರ್ಜನ್ಯಗಳು ನಡೆದಿವೆ. ಇವತ್ತಿನ ಪೇಪರ್‌ನಲ್ಲಿ ಬಂದಿರುವುದನ್ನೂ ನೋಡಿ ಕೊಂಡು ಹೇಳುತ್ತಿದ್ದೇನೆ. ತಮ್ಮ ಸರ್ಕಾರದ ನೇತೃತ್ವದಲ್ಲಿ ಏನೇನು ನಡೆದಿದೆ ಅದನ್ನು ನಾನು ಹೇಳುತ್ತಿದ್ದೇನೆ...

ಶ್ರೀ ಧರ್ಮಸಿಂಗ್.—ಸಾಮ್ಯ ಅಧ್ಯಕ್ಷರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಹೇಳಿದ್ದನ್ನೇ ಅನುಸರಿಸಿಕೊಂಡು ಹೋದರೆ ನಾಳೆ ಬಹಳ ತೊಂದರೆಯಾಗುತ್ತದೆ. ಯೂ ಕ್ರಿಯೇಟ್ ಕಾನ್‌ಫಿಜನ್ಸ್...

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಅವರು ಉಪ ನಾಯಕರಂ...

ಶ್ರೀ ಧರ್ಮಸಿಂಗ್.—ನೀವು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ತೆಗೆದುಕೊಂಡು ಬಂದೇ ಅವರು ಇಲ್ಲಿ ಹೇಳುತ್ತಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾನ್ಯ ರಾಮಕೃಷ್ಣ ಹೆಗಡೆಯವರ ಹೆಸರನ್ನು ಹೇಳಿರುವ ದರಿಂದ ನಾನು ಹೇಳುತ್ತಿದ್ದೇನೆ. ನಿನ್ನೆಯ ದಿವಸ ನಾನು ದೆಹಲಿ ಯಿಂದ ಬರುತ್ತಿದ್ದೆ. ಆಗ ಕಾಂಗ್ರೆಸ್ ಪಕ್ಷದ ಮಂಖಿಂಡರು, ಮೈನಾರಿಟಿಯವರು, ಹರಿಜನ ಲೀಡರ್ಸ್, ನವರಿಗೆ ಈ ಕಾಂಗ್ರೆಸ್‌ನಲ್ಲಿ ಪ್ರೊಟೆಕ್ಷನ್ ಸಿಕ್ಕುತ್ತಿಲ್ಲ ಎಂದು ಬಹಳವಾಗಿ ಕೊಂಡಾಡುತ್ತಿದ್ದರು. ವ್ಯಂಗ್ಯವಾಗಿ ಇಲ್ಲಿ ನೀವು ನಮ್ಮ ಬಗ್ಗೆ ಹೇಳುತ್ತಿದ್ದೀರಿ, ನಾಚಿಕೆಯಾಗಬೇಕು ನಿವಂಗೆ...

SSI M. MALLIKARJUNA KHARGE.—I am verey sorry. ನಿಮಗೆ ನಾಚಿಕೆಯಾಗಬೇಕು. ನೀವು ಇಲ್ಲಿ ಏನು ಹೇಳುತ್ತೀರೋ ಹೇಳಿ....Don't compare Karnataka with any other States. Here you are ruling. you are responsible, not Bihar or Madhya Pradesh people.

* * *

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ಅವರು ಹೇಳಿದರಲ್ಲಾ "ನಾಚಿಕೆ ಆಗಬೇಕು. ಎಂದು ಅದಕ್ಕೆ ನಾನು ಹೇಳುತ್ತೇನೆ. Don't compare Karnataka with any other State

SRI P. G. R. SINDHIA.—You are the Deputy Leader on that side You should not use such foul language. ನಿಮ್ಮ ಕಾನ್‌ಸ್ಟಿಟ್ಯುಯನ್ಸಿಯಲ್ಲಿ ನಿವಂಗೆ ಪ್ರೊಟೆಕ್ಷನ್ ಇದೆಯೇನೋ ನೋಡಿಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು.—ದಯವಿಟ್ಟು ಇಷ್ಯೂಗೆ ಬನ್ನಿ ಅದರ ಬಗ್ಗೆ ನಡೆದುದ್ದನ್ನು expunge ಮಾಡಿ. ಏಕವಚನದಲ್ಲಿ ಯಾರೂ ಮಾತನಾಡಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾನು ಮಾಡಿದೆನೋ ಅಥವಾ ಅವರು ಮಾಡಿದರೋ ? ಯಾರು ಮಾಡಿದ್ದು ?

SRI P. G. R. SINDHIA.—You cannot use that vulgar language.

(ಗೊಂದಲ)

---

*Expunged as orderd by the Chair

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಿಮಗೆ ಬಹಳ ಪ್ರೊಟೆಕ್ಷನ್ ಕೊಟ್ಟಿದ್ದಾರೆ. ಕೂತ್ಕೋಳ್ರಿ ಸಾಕು. ನಾನೂ ನೋಡಿದ್ದೀನಿ.

ಶ್ರೀ ಬಿ. ಲಕ್ಕಪ್ಪ.—ಅವರು ಏನು ಹೇಳಿದರು ಅಂದರೆ...

ಶ್ರೀ ಪಿ. ಜಿ. ಆರ್. ಸಿಂಧ್ಯ.—ನನ್ನನ್ನು ವಿಕವಚನದಲ್ಲಿ ಮಾತನಾಡಿಸಿದ್ದು ಖಾರ್ಗೆಯವರು, ಮಾತನಾಡಿದ್ದು ನೀವಲ್ಲ....

(ಗೊಂದಲ)

ಉಪಾಧ್ಯಕ್ಷರು.—ದಯವಿಟ್ಟು ಕೂತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೆ, ಇದು ಸರ್ಕಾರದವರೇ ಕೊಟ್ಟಿರುವಂಥ ವರದಿ. ನಾನು ಮನೆಯಿಂದ ತಂದಿದ್ದೇನೂ ಅಲ್ಲ...

ಉಪಾಧ್ಯಕ್ಷರು.—ನೀವು ನೇರವಾಗಿ ವಿಷಯದ ಮೇಲೆ ಹೇಳಿ. ನೇರವಾಗಿ ವಿಷಯಕ್ಕೆ ಬನ್ನಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಊರುಗಳ ಹೆಸರುಗಳನ್ನು ಹೇಳುತ್ತಿದ್ದೇನೆ. ವಿಷಯದಿಂದ ಬಿಟ್ಟು ಬೇರೆ ಕಡೆ ಹೋಗುವುದಿಲ್ಲ. ಆದರೆ ನಾನು ಹೇಳತಕ್ಕಂಥದ್ದು ಶಿಡ್ಲಘಟ್ಟ, ಚಿಕ್ಕನಹಳ್ಳಿ, ಕನಕಪುರದಲ್ಲಿ...

ಶ್ರೀ ಪಿ. ಜಿ. ಆರ್. ಸಿಂಧ್ಯ,—ಏನು ಅದು ದಯವಿಟ್ಟು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೇಳುತ್ತೇನೆ. ನಿಮ್ಮಕಡೆ ಕಳುಹಿಸಿಕೊಡುತ್ತೇನೆ. ದಯವಿಟ್ಟು ತಾವು ಓದಿಕೊಳ್ಳಿ. ಯಾವ ಯಾವ ಊರುಗಳಲ್ಲಿ ಅಟ್ರಾಸಿಟಿಯಾಗಿದೆ ಎನ್ನುವುದು ಲೆಜಿಸ್ಲೇಟರ್ ದಾಖಲೆ ಇದೆ. ಸುಮ್ಮನೆ ವೇಗ್ ಆಗಿ ಚಾರ್ಜ್‌ಮಾಡುತ್ತೇನೆಂದು ತಿಳಿದುಕೊಳ್ಳಬೇಡಿ. ನಮ್ಮಲ್ಲಿ ಈ ರೀತಿಯಾಗಿ ಸುಮಾರು ೧೫–೨೦ ಉದಾಹರಣೆಗಳು ಇರುತ್ತವೆ. ಬಿರಾಲ ಒಂದು ಹಳ್ಳಿ ಅಲ್ಲೂ ಕೂಡ ಸೋಷಿಯಲ್ ಬಾಯ್‌ಕಾಟ್ ಮಾಡಿರುತ್ತಾರೆ. ಅವರಿಗೆ ಪರಿಹಾರ ಸಿಕ್ಕಿಲ್ಲ. ಅಲ್ಲಿರತಕ್ಕಂಥ ಹರಿಜನ ಗಿರಿಜನರು ಹಿಟ್ಟಿನ ಗಿರಣಿಗೆ ಹೋಗುವಂತಿಲ್ಲ. ಕಿರಾಣಿ ದುಖಾನ್‌ಗಳು ಒಂದೂ ಇಲ್ಲ. ಈ ರೀತಿ ಸುಮಾರು ೧೬–೧೮ ಇನ್‌ಸಿಡೆಂಟ್ಸ್ ಬೇಕಾದರೆ ಹೇಳುತ್ತೇನೆ. ಎಲ್ಲವನ್ನೂ ಓದಬೇಕೆಂದರೆ ಸಮಯ ಕೊಟ್ಟಲ್ಲಿ ಓದುತ್ತೇನೆ. ಅಟ್ರಾಸಿಟಿ ಕಡಿಮೆಯಾಗಿದೆ ಎಂದು ತಾವು ಹೇಳುತ್ತೀರಿ. ೧೯೮೬ರ ಅನ್ಯುಯಲ್ ರಿಪೋರ್ಟ್ ಪೋಲೀಸ್ ಡಿಪಾರ್ಟ್‌ಮೆಂಟ್‌ನದು ತಾವೇ ಪ್ರಿಂಟ್‌ಮಾಡಿರುವ ರಿಪೋರ್ಟ್ ೧೯೮೫–೮೬ನೇ ಇಸವಿಯದು ತಮ್ಮದೇ ಸರ್ಕಾರದ ರಿಪೋರ್ಟ್ ಕೂಡ ಇದೆ. ತಮಗೆ ಗೊತ್ತಿದೆ. ಇದರಲ್ಲಿ ಎಸ್‌ಸಿ, ಎಸ್‌ಟಿ ಆಫೇರ್ಸ್ ಎಂದು ಪೇಜ್‌ನಂಬರ್ ೧೭ರಲ್ಲಿ ವಿವರಗಳು ಇರುತ್ತವೆ. There was increase in the number of cases of attrocities on SCs/STs during the year. Significant incidents were reported during the year. ಎಂದು ಹೇಳಿ ಹೆಸರುಗಳನ್ನು ಕೊಟ್ಟಿದ್ದೀರಿ. ಅಂದರೆ ಅಟ್ರಾಸಿಟಿ ಪ್ರತಿದಿವಸ ಇನ್‌ಕ್ರೀಸ್ ಆಗಿರುವುದನ್ನು ನಿಮ್ಮ ರಿಪೋರ್ಟ್‌ನಲ್ಲಿಯೇ ಕೊಟ್ಟಿದ್ದೀರಿ. ನಮ್ಮದೇನಲ್ಲ ಇದೇನು ಸುಳ್ಳು ಹೇಳುತ್ತಿಲ್ಲ, ಸತ್ಯಕ್ಕೆ ದೂರವಾದುದನ್ನು ಹೇಳುತ್ತಿಲ್ಲ. ನಮ್ಮಲ್ಲಿರತಕ್ಕಂಥ ಅಂಕಿಅಂಶಗಳು ಸರಿಯಲ್ಲದಿದ್ದರೆ ಹೇಳಿ ದಯವಿಟು ತಿದ್ದಿಕೊಳ್ಳುತ್ತೇವೆ. ನಿಮ್ಮ ರಿಪೋರ್ಟ್ ಪ್ರಕಾರ ಮೇಜರ್ ಇನ್‌ಸಿಡೆಂಟ್ಸ್ ನಡದಿರತಕ್ಕಂಥದ್ದು ಚಿತ್ರದುರ್ಗ, ಕೋಲಾರ ಮೈಸೂರು, ಶಿವಮೊಗ್ಗ, ಹಾಸನ, ಚಿತ್ರದುರ್ಗ, ಮಂಡ್ಯ,ಬೆಂಗಳೂರು, ತುಮಕೂರು ಜಿಲ್ಲೆಗಳಲ್ಲಿ Several instance are there, I do not wnat to go into the details. ಆನ್ಯಾಯಗಳನ್ನು ತಪ್ಪಿಸಲಿಕ್ಕೆ ಬದಲಾಗಿ ಹೆಚ್ಚಾಗುತ್ತಿದೆ. ಇದಕ್ಕೆ ಕಾರಣರಾರು ಮಾನ್ಯ ಜಾಲಪ್ಪನವರೇ ಎಂದು ಹೇಳುವುದಿಲ್ಲ. ಮಾನ್ಯ ಸಿಂಧ್ಯರವರು ಕಾರಣರೆಂದು ಹೇಳುವುದಿಲ್ಲ, ಒಟ್ಟಿನಲ್ಲಿ ಹೆಚ್ಚಾಗಿದೆ ಅದನ್ನು ತಾವು ಒಪ್ಪಿಕೊಳ್ಳಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಅಧಿಕಾರಿಗಳು ನಿಮ್ಮ ಪಕ್ಷಕ್ಕೆ ವಶವಾಗಿದ್ದಾರೆ. ಅವರು ಏನು ಮಾಡುತ್ತಾರೆ, ಎಲ್ಲ ನಿಮ್ಮದೇ ನಡೆಯಬೇಕು, ನೀವು ಹೇಳಿದಹಾಗೆ ಆಗಬೇಕು. ವೆಸ್ಟೆಡ್ ಇಂಟರೆಸ್ಟ್ ಮುಖ್ಯಮಂತ್ರಿಗಳ ಹತ್ತಿರ ಹೋಗುತ್ತಾರೆ, ಫೋನ್ ಮಾಡಿಸುತ್ತಾರೆ, ಸಬ್‌ಇನ್‌ಸ್ಪೆಕ್ಟರ್ ಮೇಲೆ ಸರ್ಕಲ್ ಇನ್‌ಸ್ಪೆಕ್ಟರ್ ಇರುತ್ತಾನೆ. ಸರ್ಕಲ್ ಇನ್‌ಸ್ಪೆಕ್ಟರ್ ಕೇಸ್ ಬುಕ್ ಮಾಡು ಎಂದರೆ ಮಾಡಬೇಕು, ವಿತ್‌ಡ್ರಾ ಮಾಡು ಎಂದರೆ ವಿತ್‌ಡ್ರಾ ಮಾಡಬೇಕು. ಸರ್ಕಲ್ ಇನ್‌ಸ್ಪೆಕ್ಟರ್ ಕೇಳದಿದ್ದರೆ ೨೪ ಗಂಟೆಗಳಲ್ಲಿ ಟ್ರಾನ್ಸ್‌ಫರ್

ಮಾಡುತ್ತಾರೆ. ತುರ್ತು ಪ್ರಶ್ನೆ ಬಂದಾಗ ನಿಮ್ಮ ಮಾತನ್ನೂ ಸಹ ಕೇಳುವುದಿಲ್ಲವೆಂದು ನನಗನಿಸುತ್ತದೆ, ನಿಮಗೆ ಇಂಪ್ಲಿಮೆಂಟ್ ಮಾಡಬೇಕೆಂದು ಆಸೆ ಆಕಾಂಕ್ಷೆಗಳು ಇದ್ದರೂ ನಿಮ್ಮ ಸರ್ಕಾರದವರು ನಿಮಗೆ ಅದಕ್ಕೆ ಅವಕಾಶ ಕೊಡುವುದಿಲ್ಲ. ಅದಕ್ಕಾಗಿ ಈ ರಿಪೋರ್ಟ್‌ನ್ನು ಒಪ್ಪಿಕೊಳ್ಳಿ ಇದು ನಿಮ್ಮ ರಿಪೋರ್ಟ್ ಮಾನ್ಯ ಜಾಲಪ್ಪನವರು ಹೇಳಿದರು ನಮ್ಮ ಕಾಲದಲ್ಲಿ ಅಂಥ ಘಟನೆಗಳಲ್ಲಿ ಕಡಿಮೆ ಆಗಿವೆ ಲಾ ಅಂಡ್ ಆರ್ಡರ್ ಒಳ್ಳೆಯ ರೀತಿಯಲ್ಲಿ ಮೈಂಟೇನ್ ಮಾಡಿದ್ದೇವೆ. ದಿನೇ ದಿನೇ ಕ್ರೈಮ್ಸ್ ಕಡಿಮೆ ಆಗುತ್ತಿವೆ ಎಂದು ಹೇಳಿದರು. ಮರ್ಡರ್ಸ್, ಡಕಾಯಿತ್ಸ್, ಅಟ್ರಾಸಿಟೀಸ್ ಎಲ್ಲಾ ಕಡಿಮೆ ಆಗಿವೆ ಎಂದರು. ಈ ಸಂದರ್ಭದಲ್ಲಿ ೨-೩ ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ ಮರ್ಡರ್ ೧೯೮೫ರಲ್ಲಿ ೧೦೦೨, ೧೯೮೬ರಲ್ಲಿ ೧೦೭೧. ಡಕಾಯಿತ್ಸ್ ೧೯೮೫ರಲ್ಲಿ ೧೭೫, ೧೯೮೬ರಲ್ಲಿ ೨೫೯, ರಾಬರೀಸ್ ೧೯೮೫ರಲ್ಲಿ ೪೭೧, ೧೯೮೬ರಲ್ಲಿ ೪೮೦ ಅಂದರೆ ಕಡಿಮೆ ಆಯಿತೋ ಜಾಸ್ತಿ ಯಾಯಿತೋ ?

ಒಬ್ಬ ಮಾನ್ಯ ಸದಸ್ಯರು.—ಬರಗಾಲ ಇರುವುದರಿಂದ ಜಾಸ್ತಿಯಾಗಂತ್ತಿದೆ,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಆರ್ಡಿನರಿ ತೆಫ್ಟ್ ೧೯೮೫ರಲ್ಲಿ ೧೬೧೬ ಆದರೆ ೧೯೮೬ರಲ್ಲಿ ೧೬೫೬. ರಯಟಿಂಗ್ಸ್ ೧೯೮೫ರಲ್ಲಿ ೫೮೨೧ ಆದರೆ ೧೯೮೬ರಲ್ಲಿ ೬೦೧೯.

ಶ್ರೀ ಆರ್. ಎಲ್. ಜಾಲಪ್ಪ.—ಅದೆಲ್ಲಾ ಅವರಿಗೆ ಎಲ್ಲಿಂದ ಬಂತೋ ಗೊತ್ತಿಲ್ಲ.

SRI MALLIKARJUN M KHARGE.—I am very much sorry. The minister is ignorant about his own report.

SRI R. L. JALAPPA.—I am not ignorant. it is not correct,

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಎಲ್ಲಿಂದ ತಂದಿದ್ದಾರೆಂದರೆ ಏನು ಹೇಳಲಿ ? Tnis is the Annual report of the Police Department. Page No. 33-SCs/STs affairs deals in page 17.

ಶ್ರೀ ಧರ್ಮಸಿಂಗ್.—ಮಾನ್ಯ ಜಾಲಪ್ಪನವರು ಇನ್ನೂ ಸಹಕಾರ ಇಲಾಖೆಯಲ್ಲೇ ಇದ್ದಾರೆ. ಅವರಿಗೆ ಸಹಕಾರ ಇಲಾಖೆಯ ಅಂಕಿ ಅಂಶ ಗೊತ್ತಿದೆಯೇ ಹೊರತು ಇದು ಗೊತ್ತಿಲ್ಲ. ಬಹುಶಃ ಅವರಿಗೆ ಪೋಟ್‌ಫೋಲಿಯೋ ಬದಲಾವಣೆಯಾಗಿರುವುದು ಗೊತ್ತಿಲ್ಲವೆಂದು ಕಾಣುತ್ತದೆ.

SRI R. L. JALAPPA.—They are the general crimes committed in the entire Karnataka, and not on Harijans.

ಶ್ರೀ ಮಲ್ಲಿಕಾರ್ಜುನ ಖರ್ಗೆ,—ನಾನು ಹರಿಜನ್ಸ್ ಮೇಲೆ ಅಷ್ಟೇ ಎಂದು ಹೇಳಿದೆನೇ ?

SRI R. L. JALAPPA,—You are now speaking on the atrocities committed on Harijans, please restrict yourselves to that only.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇದನ್ನೆಲ್ಲಾ ನಾನು ನಿಮ್ಮ ನಜರಿಗೆ ಏತಕ್ಕೆ ತರುತ್ತಿದ್ದೇನೆಂದರೆ, ಹೇಗೆ ಈ ಡಕಾಯಿತಿಗಳು, ಮರ್ಡರ್‌ಗಳು, ಅಟ್ರಾಸಿಟೀಸ್ ಪ್ರತಿ ವರ್ಷ ಜಾಸ್ತಿಯಾಗುತ್ತಿವೆ. ಎಂಬುದಕ್ಕೆ ಹೇಳುತ್ತಿದ್ದೇನೆ. ಬರೀ ಪೋಲೀಸ್‌ಗಿರಿ ಮಾಡಿದರೆ ಹೇಗೆ ನಡೆಯಂತ್ತದೆ ? ಅದೇ ಪುಟದಲ್ಲಿರತಕ್ಕ ಪಂತ್ತೊಂದು ಅಂಶವನ್ನು ತಮ್ಮ ಗಮನಕ್ಕೆ ತರತ್ತಿದ್ದೇನೆ. ನೀವು ಬೇಕಾದರೆ ವರದಿಯನ್ನು ತರಿಸಿಕೊಂಡು ನೋಡಿ ie reports about the protection of civil rights.

> "The Civil rights enforcements cell continued to do good work. The object of Civil Rights Enforcement Cell is for the effective implementation of the provisions of protection of civil rights reddressal of grievances of SCs/STs"

Further it says. "734 cases were reported undeer the provisions of the Civil Rights enforcement Act".

ಇದು ಕೂಡ ೧೯೮೫ರಲ್ಲಿ ೬೭೦ ಚಿಲ್ಲರೆ ಇದ್ದದ್ದು ೧೯೮೬ರಲ್ಲಿ ೭೦೦ ಚಿಲ್ಲರೆ ಆಯಿತು. ಅಂದರೆ ಕಡಿಮೆ ಆಯಿತೋ ಜಾಸ್ತಿಯಾಯಿತೋ ? ನಾನು ಬೇರೆ ಬೇರೆ ಅಂಕಿ ಅಂಶಗಳನ್ನು ಏತಕ್ಕೆ ಕೊಟ್ಟೆ ಎಂದರೆ ಲಾ ಆಂಡ್ ಆರ್ಡರ್ ಸರಿಯಿಲ್ಲದೆ ವೆಸ್ಟೆಡ್ ಇಂಟರೆಸ್ಟ್‌ಕ್ಲಾಸನ್ ತಲೆಲವಾಂತರಗಳಿಂದ ದಬ್ಬಾಳಿಕೆ ಮಾಡಿಕೊಂಡುಬರುತ್ತಿದ್ದಾರೆ. ಅವರ ಕೈಯಲ್ಲಿ ಸಿಕ್ಕಿದ್ದರಿಂದ ಕ್ರೈಮ್ಸ್ ಹೆಚ್ಚಿಗೆ ಆಗುತ್ತಿವೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದನ್ನು ತಾವು ಒಪ್ಪಬೇಕು. ಇದು ನಿಮ್ಮ ರಿಪೋರ್ಟ್.

ಶ್ರೀ ಜಿ. ಬಸವಣ್ಣಪ್ಪ.—ಸಿವಿಲ್ ರೈಟ್ಸ್ ಕೇಸಸ್ ಜಾಸಿಯಾಗುತ್ತಾ ಹೋಗುತ್ತಿರುವುದು due to activisation of C. R. E. Cell. ಹಳ್ಳಿಹಳ್ಳಿಗೆ ಹೋಗಿ ಅಸ್ಪೃಶ್ಯತೆ ಬಗ್ಗೆ ತಿಳುವಳಿಕೆ ಕೊಟ್ಟು ಚೆನ್ನಾಗಿ ಕೆಲಸ ಮಾಡುತ್ತಿರುವುದರಿಂದ ಆಗುತ್ತಿದೆ. That is why these cases are booked more in number.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ—ಇದು ಆದಕ್ಕಲ್ಲ. ಆದರೆ ಮರ್ಡರ್, ತೆಫ್ಟ್, ಡಕಾಯಿತಿ ಜಾಸ್ತಿಯಾಗಿದೆಯಲ್ಲಾ ಇದು ಏತಕ್ಕೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಬಸವರಾಜ್.—ನಾಲ್ಕು ವರ್ಷದಿಂದ ರಾಜ್ಯದಲ್ಲಿ ಬರಗಾಲ ಇರುವುದರಿಂದ ಡಕಾಯಿತಿ ಅದೆಲ್ಲಾ ಏತಕ್ಕೆ ಜಾಸ್ತಿಯಾಗಿದೆ, ಬರಗಾಲ ಹೀಗೇ ಮುಂದುವರೆದರೆ. ಇನ್ನೂ ಜಾಸ್ತಿಯಾಗುತ್ತದೆ,

ಶ್ರೀ ಎಸ್. ಬಂಗಾರಪ್ಪ.—ನೀವಿರುವವರೆಗೂ ಬರಗಾಲ ತಪ್ಪುವುದಿಲ್ಲ. ಮರ್ಡರ್ ಕೇಸ್ ಜಾಸ್ತಿಯಾಗುತ್ತಾ ಇರುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ—ನಾನು ಏತಕ್ಕೆ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಎಂದರೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ನವರ ಮೇಲೆ ಅಟ್ರಾಸಿಟೀಸ್ ಹೆಚ್ಚಿನ ರೀತಿಯಲ್ಲಿ ಆಗುತ್ತಿದೆ ಎಂಬ ದೃಷ್ಟಿಯಿಂದ. ಆದಕ್ಕೆ ನಾನು ತಮಗೆ ಕೇಳುವುದೇನೆಂದರೆ ಕೊನೇ ಪಕ್ಷ ಕೆಲವು ಇನ್‌ಸ್ಟೆನ್ಸಸ್‌ನಲ್ಲಿ ಅಂದರೆ ಬೆಳಗಾಂ ಜಿಲ್ಲೆಗೆ ಸಂಬಂಧಪಟ್ಟಂತೆ ಬೆಂಡಿಗೇರಿ ಪ್ರಕರಣಕ್ಕೆ ಮತ್ತು ಕಾಸಾರಸಿರ್ಸಿ ಈ ಎರಡು ಇನ್‌ಸ್ಟೆನ್ಸಸ್‌ನಲ್ಲಾದರೂ ಹೌಸ್‌ಕಮಿಟಿ ಮಾಡಿ. ನಾನು ಎಲ್ಲದಕ್ಕೂ ಮಾಡಿ ಎಂದು ಹೇಳುವುದಿಲ್ಲ. ಏಕೆಂದರೆ ಎಲ್ಲಾ ಕಡೆ ಹೋಗಿ ನೋಡುವುದಕ್ಕಾಗುವುದಿಲ್ಲ. ಆಲ್ಲಿ ಏತಕ್ಕೆ ಇದಾಗುತ್ತಿದೆ, ಇದರ ಬ್ಯಾಕ್‌ಗ್ರೌಂಡ್ ಏನು, ಜನ ಏತಕ್ಕೆ ಹೀಗೆ ಮಾಡುತ್ತಾರೆ ಎಂಬುದನ್ನು ಕಂಡು ಹಿಡಿದಹಾಗೆ ಆಗುತ್ತದೆ. ಮಂತ್ರಿ ನಿಮಗೂ ಕೂಡ ಮಾರ್ಗದರ್ಶನವಾಗುತ್ತದೆ, ನೀವು ಆ ವರದಿಯನ್ನು ಇಂಪ್ಲಿಮೆಂಟ್ ಮಾಡಬಹುದು. ಈ ಎರಡೂ ಪ್ರಕರಣಗಳಿಗೆ ಸಂಬಂಧಿಸಿದಂತೆ ಹೌಸ್ ಕಮಿಟಿ ಮಾಡಿ ರಿಪೋರ್ಟನ್ನು ಸದನದ ಮುಂದೆ ಇಟ್ಟರೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲ ಆಗುತ್ತದೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೇವಲ ಅಂಕಿಅಂಶ ಕೊಟ್ಟು ನಾನು ಹೆಚ್ಚೋ ನೀನುಹೆಚ್ಚೋ ಎನ್ನುವ ಪ್ರಶ್ನೆಯಲ್ಲ. ಫ್ಯಾಕ್ಟ್ಸ್ ಇದ್ದಾದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಕೊಟ್ಟಿರುವ ಅಂಕಿಅಂಶಗಳನ್ನು ಹೇಳಿದರೂ ಅವರಿಗೆ ಯಾತಕ್ಕೆ ಸಿಟ್ಟು ಬರುತ್ತದೋ ನನಗೆ ಅರ್ಥ ಆಗುತ್ತಿಲ್ಲ. ಸಿ.ಆರ್.ಇ. ಸೆಲ್‌ನ್ನು ಕೂಡ ಬಿಗಿ ಮಾಡಿ ಸಿವಿಲ್ ಎನ್‌ಫೋರ್ಸ್‌ಮೆಂಟ್ ಆಕ್ಟ್‌ನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಜಿಲ್ಲಾ ಮಂತ್ರಿಗಳು ಯಾರಿದ್ದಾರೆ ಅವರು ಈ ಬಗ್ಗೆ ರೆವ್ಯೂ ಮಾಡುವಂತೆ ಮಾಡಿ ಈ ಕೆಲಸ ತೆಗೆದುಕೊಂಡರೆ ಸಾಧ್ಯವಾಗುತ್ತದೆ. ಇಲ್ಲದೇಹೋದರೆ ಸಾಧ್ಯವಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಕೊನೆಯದಾಗಿ ಕಳಕಳಿಯಿಂದ ತಮ್ಮಿ ಪರಿಮಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ ಹೌಸ್ ಕಮಿಟಿ ಮಾಡುವುದಕ್ಕೆ ಒಪ್ಪಬೇಕು. ಒಪ್ಪಿದರೆ ಅನ್ಯಾಯಗಳು ಬಹಿರಂಗವಾಗುತ್ತವೆ. ಆದ್ದರಿಂದ ಹೌಸ್ ಕಮಿಟಿಗೆ ಒಪ್ಪುತ್ತಾರೆಂದು ನಂಬಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ್.—ನನ್ನ ಕ್ಷೇತ್ರದಲ್ಲಿ ೯೦ ಭಾಗ ಕಾಂಗ್ರೆಸ್ ಪಾರ್ಟಿಯವರು ಜನತಾ ಪಾರ್ಟಿಯವರಿಗೆ ಹೊಡೆದಿರುವುದರಿಂದ ಜನರನ್ನು ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದಾರೆ. ಬೇಕಾದರೆ ಎನ್‌ಕ್ವೈರಿ ಮಾಡಲಿ. ನಾನು ಹೇಳಿದ್ದು ತಪ್ಪಾಗಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ. ಇಲ್ಲದಿದ್ದರೆ ನೀವು ಕೊಡಿ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಉಪನಾಯಕರು ಬಹಳ ವಿವರವಾಗಿ ಈ ರಾಜ್ಯದಲ್ಲಿ ಪೆಡ್ಡೂಲ್ಡ್ ಕ್ಯಾಸ್ಟ್‌ನವರ ಮೇಲೆ ಯಾವರೀತಿ ದೌರ್ಜನ್ಯ ನಡೆಯುತ್ತಿದೆ ಎಂಬುದನ್ನು ವಿಸ್ತಾರವಾಗಿ ಹೇಳಿದ್ದಾರೆ. ಅವರು ಭಾಷಣ ಪ್ರಾರಂಭ ಮಾಡಿದಾಗ ಮಾನ್ಯ ಸಿಂಧ್ಯ ಅವರು ಬಂದಿರಲಿಲ್ಲ. ಆಗ ನಾನು ಮಾನ್ಯ ಜಾಲಪ್ಪನವರಿಗೆ ಹೇಳಿದೆ...

ಉಪಾಧ್ಯಕ್ಷರು.—ಅವರು ಬೇಡಿದ ಅಂಕಿ ಅಂಶ ಬಿಟ್ಟು ಬೇರೆ ಹೇಳಿ.

† ಶ್ರೀ ಧರ್ಮಸಿಂಗ್.—ಪ್ರಸ್ತಾವಿಕವಾಗಿ ಸ್ವಲ್ಪ ಹೇಳಬೇಕಲ್ಲಾ. ಇದು ನಮ್ಮ ಕಾಲದಲ್ಲಿ ನಡೆದಿರುವುದು ಅಥವಾ ನಿಮ್ಮ ಕಾಲದಲ್ಲಿ ನಡೆದಿರುವುದು ಎಂಬ ಪ್ರಶ್ನೆಯಲ್ಲ. ೧೯೮೩ ರಿಂದ ಕರ್ನಾಟಕ ರಾಜ್ಯದಲ್ಲಿ ಈ ತರಹ ದೌರ್ಜನ್ಯದ ಘಟನೆ ಗಳು ನಡೆಯುತ್ತಿವೆ. ಪೊಲಿಟಿಕಲ್ ಆಟ್‌ಮಾಸ್ಫಿಯರ್ ಏನು ಕ್ರಿಯೇಟ್ ಆಗಿದೆ ನಮಗೆ ಯಾರೂ ಸೆಕ್ಯೂರಿಟಿ ಇಲ್ಲ, ನಮ್ಮನ್ನು ಯಾರೂ ಕೇಳತಕ್ಕವರು ಇಲ್ಲ ಎಂದು ಆದರಿಂದ ಇದಾಗುತ್ತಿದೆ. ಮಾನ್ಯ ದೇವರಾಜ ಅರಸ್ ಅವರು ಮುಖ್ಯಮಂತ್ರಿ ಆದಮೇಲೆ ೧೯೮೦ ರವರೆಗೆ ಕರ್ನಾಟಕ ರಾಜ್ಯದಲ್ಲಿ ಹರಿಜನ ಗಿರಿಜನ ಮತ್ತು ದುರ್ಬಲವರ್ಗದವರಿಗೆ ಏನು ಪ್ರೊಟೆಕ್ಷನ್ ಇತ್ತು ಅದು ಈಗಿನ ಜನತಾ ಸರ್ಕಾರದಲ್ಲಿ ಇಲ್ಲ ಎಂಬ ಭಾವನೆ ಎಲ್ಲಾ ಕಡೆ ಇದೆ. ಇದನ್ನು ಅವರು ಒಪ್ಪಿಕೊಳ್ಳಬೇಕು. ಶ್ರೀಮಾನ್ ಜಾಲಪ್ಪನವರು ಅಂಕಿ ಅಂಶಗಳ ಮುಖಾಂತರ ನಿಮ್ಮ ಕಾಲದಲ್ಲಿ ಎಷ್ಟು ಆಗಿವೆ ? ನಮ್ಮ ಕಾಲದಲ್ಲಿ ಎಷ್ಟು ಆಗಿವೆ ಎಂಬ ವರದಿಯನ್ನು ಇಟ್ಟು ಹೇಳಿದರೆ ಇದರಿಂದ ಸ್ಯಾಟಿಸ್‌ಫೈ ಆಗುವುದಿಲ್ಲ. ಯಾರಮೇಲೆ ದೌರ್ಜನ್ಯ ಆಗಿದೆಯೋ ಆ ಜನರಲ್ಲಿ you have to creat confidence in the minds of the people. ಸರ್ಕಾರ ನಮ್ಮ ನೆರವಿಗೆ ಬರುತ್ತದೆ ಎನ್ನುವ ಭಾವನೆ ಬರತಕ್ಕ ರೀತಿಯಲ್ಲಿ ಇವತ್ತು ಆಗುತ್ತಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳೂ ಯಾವಾಗಲೂ ಅಂಕಿ ಅಂಶಗಳನ್ನು ಇಟ್ಟುಕೊಂಡು ಹೇಳುತ್ತಾರೆ. ಮೊನ್ನೆ ಮಾನ್ಯ ಖರ್ಗೆಯವರು ಬೆಂಡಿಗೆರೆಯಲ್ಲಿ ಆದಂತಹ ಘಟನೆಯ ಬಗ್ಗೆ ಹಾಗೂ ನಾನು ನನ್ನ ಕ್ಷೇತ್ರದಲ್ಲಿ ಆದಂತಹ ಘಟನೆಯ ಬಗ್ಗೆ ಗಮನಸೆಳೆಯುವ ಸೂಚನೆಯಮೂಲಕ ಪ್ರಸ್ತಾಪ ಮಾಡಿದಾಗ ಮಾನ್ಯ ಬೊಮ್ಮಾಯಿರವರು ಬಿಹಾರ್‌ದಲ್ಲಿ ಏನಾಗುತ್ತಿದೆ ಯಲ್ಲಾ, ಪಿ. ಯುಲ್ಲಿ ಏನಾಗುತ್ತಿದೆ ಅಂತ ಹೇಳಿದರು, ಇಲ್ಲಿ ಅದೆಲ್ಲ ಮುಖ್ಯ ಆದರೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಏನೊಂದು ಘಟನೆಗಳಾಗಿವೆ, ಆ ಘಟನೆಗಳ ಜವಾಬ್ದಾರಿ ತಮ್ಮ ಮೇಲೆ ಇದೆ. ಮಾನ್ಯ ಗೃಹ ಮಂತ್ರಿಗಳ ಮೇಲೆ ಇದೆ. ಕರ್ನಾಟಕ ಸರ್ಕಾರದ ಮೇಲೆ ಇದೆ. ಮಾನ್ಯ ಖರ್ಗೆಯವರು ಸಾವಕಷ್ಟು ವಿವರಗಳನ್ನು ಈ ರೀತಿ ನಡೆದಂತಹ ಘಟನೆಗಳ ಬಗ್ಗೆ ಕೊಟ್ಟಿದ್ದಾರೆ. ಮೊನ್ನೆ ಕೂಡ ನಮ್ಮ ಗಮನ ಸೆಳೆಯುವ ಸೂಚನೆಗೆ ತೃಪ್ತಿಕರವಾದ ಉತ್ತರ ಸರ್ಕಾರದಿಂದ ಬರಲಿಲ್ಲ. ಮಾನ್ಯ ಸಿಂಧ್ಯರವರು ಕೇಳ ಬಹುದು, ಚಿಕ್ಕನಾಯಕನಹಳ್ಳಿಯಲ್ಲಿ ಆಗಿರುವಂತಹ ಘಟನೆ ಇರಬಹುದು. ೧೯೫೨ ರಿಂದ ಇಲ್ಲಿಯವರೆಗೂ ಗುಲ್ಬರ್ಗ ಜಿಲ್ಲೆಯ ಜೇವರ್ಗಿ ತಾಲ್ಲೂಕಿನಲ್ಲಿ ಈ ರೀತಿಯ ಘಟನೆ ಎಂದೂ ನಡೆದಿಲ್ಲ. ನಾನೂ ಕಳೆದ ೧೮ ವರ್ಷಗಳಿಂದಲೂ ಆ ಕ್ಷೇತ್ರವನ್ನು ಪ್ರತಿನಿಧಿಸುತ್ತಾ ಬಂದಿದ್ದೇನೆ. ಇಲ್ಲಿಯವರೆಗೂ ಇಂತಹ ಅಮಾನವೀಯ ಘಟನೆ ಎಂದೂ ನಡೆದಿಲ್ಲ. ಆಗಸ್ಟ್ ೧೫ನೇ ತಾರೀಖಿನ ದಿವಸ ಆಗಿರುವಂತಹ ಘಟನೆ ಇದು. ವಿನಾಕಾರಣ ಆಗಿರುವಂತಹ ಘಟನೆ ಇದು. ಅಲ್ಲಿ ಶ್ರೀಮಹದೇವಪ್ಪ ಎಂಬುವವರು ಮಂಡಲ್ ಪಂಚಾಯ್ತಿ ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ. ಚುನಾವಣೆ ಕಾಲದಲ್ಲೂ ಆಗಿರುವಂತಹ ಘಟನೆಯ ಬಗ್ಗೆ ನಿಮ್ಮ ಪೋಲೀಸ್ ವರದಿಯನ್ನು ತರಿಸಿ ನೋಡಬಹುದು. ಆಗ ಕೂಡ ಇದೇ ರೀತಿಯ ದೌರ್ಜನ್ಯ ವನ್ನು ನಿಮ್ಮ ಪಕ್ಷದವರು ಮಾಡಿದ್ದಾರೆ. ಅವರನ್ನು ಪೋಲಿಂಗ್ ಬೂತ್‌ಗೆ ಹೋಗದ ರೀತಿಯಲ್ಲಿ ಅಡ್ಡಿ ಆತಂಕವನ್ನುಂಟುಮಾಡಿದ್ದಾರೆ. ಇವರಿಗೆ ಮೂರು ವರ್ಷಗಳ ಕಾಲ ಶಿಕ್ಷೆಯಾಗಿದೆ. ೧೫ನೇ ತಾರೀಖು ಆಗಸ್ಟ್ ತಿಂಗಳು ಶ್ರೀಮತಿ ಗುತ್ತೆವ್ವ ಹಾಗೂ ಆಕೆಯ ಗಂಡ ಸಿದ್ದಪ್ಪ, ಇವರಿಬ್ಬರೂ ತಮ್ಮ ಹೊಲ ದಲ್ಲಿ ಹೆಲ್ಲು ತೆಗೆಯುವ ಕೆಲಸ ಮಾಡುತ್ತಿದ್ದರು. ಅವರಿಬ್ಬರ ಮಕ್ಕಳು ಗುರುಲಿಂಗಪ್ಪ, ಶಂಬುಲಿಂಗಪ್ಪ ಎಸ್ ಎಸ್.ಎಲ್.ಸಿ. ವರೆಗೆ ಓದಿದಂತಹವರು. ಇವರೂ ಕೂಡ ಹೊಲದಲ್ಲಿ ಕೆಲಸ ಮಾಡುತ್ತಿದ್ದರು ಅಂದರೆ ದನಕರುಗಳು ಹೊಲಕ್ಕೆ ಬಾರದ ಹಾಗೆ ಮುಳ್ಳನ್ನು ಹಾಕುತ್ತಿದ್ದರು. ಇವರ ಜಮೀನಿನ ಪಕ್ಕದಲ್ಲಿ ಗುರುಲಿಂಗಪ್ಪ ಅಪ್ಪಿನ್ ಎಂಬುವರ ತೋಟ ಇದೆ. ಅವರ ದನಗಳು ಗುತ್ತೆವ್ವ-ಸಿದ್ದಪ್ಪ ನವರ ಹೊಲಕ್ಕೆ ಬಂದು ಮೇಯುತ್ತಿದ್ದಾಗ, ಆ ಹುಡುಗರು ದನಗಳನ್ನು ಬೆಳಿಗೆ ಬಿಡಬೇಡಿ ಅಂತ ಕೇಳಿದ್ದಕ್ಕೆ ನಿಮಗೆ ಇಷ್ಟೊಂದು ಸೊಕ್ಕು ಬಂತೆ ಎಂದು ಶ್ರೀ ವಸಂತರಾವ್ ಮಾರ್ಗ ಅವರು ಈ ಇಬ್ಬರು ಹುಡುಗರನ್ನು ಹೊಡೆದಿದ್ದಾರೆ. ಆ ಹುಡುಗರು ಪೊಡೆತವನ್ನು ತಾಳಲಾರದೆ ಮುಳ್ಳಿನ ಹಿಂದೆ ಮರೆಸಿ

ಕೊಂಡಿದ್ದಾರೆ. ಈ ರೀತಿಯಾಗುತ್ತಿರುವಂತಹ ಗಲಾಟೆಯನ್ನು ನೋಡಿ ಆ ಹುಡುಗರ ತಾಯಿ ಗುತ್ತೆವ್ವ ಹಾಗೂ ಸಿದ್ದಪ್ಪ ಏಕೆ ಸ್ವಾಮಿ ಈ ರೀತಿ ಮಾಡುತ್ತೀರಿ ? ನಿಮ್ಮ ದನಗಳು ನಮ್ಮ ಹೊಲದ ಮೇಲೆ ಬರುತ್ತವೆ ಎಂದು ಹೇಳಿದ್ದಾರೆ ಮೊನ್ನೆ ಆದಂತಹ ಗಮನ ಸೆಳೆಯುವ ಸೂಚನೆಗೆ ಗೃಹಸಚಿವರಿಂದ ಬಹಳ ತಪ್ಪಾಗಿ ಉತ್ತರ ಬಂದಿದೆ. ೧೯ನೇ ತಾರೀಖಿನ ದಿವಸ ಅಲ್ಲಿನ ಸರ್ಕಲ್ ಇನ್ಸ್‌ಪೆಕ್ಟರ್ ಹಾಗೂ ಸಬ್-ಇನ್ಸ್‌ಪೆಕ್ಟರ್ ಜೊತೆಗೆ ನಾನು ಆಊರಿಗೆ ಹೋಗಿ ಬಂದಿದ್ದೇನೆ ಪೋಲೀಸರ ಸಮಕ್ಷಮದಲ್ಲೇ ವಿಚಾರ ಮಾಡಿದ್ದೇನೆ. ಇದು ಹಿಂದೂ ವರ್ಸಸ್ ಷೆಡ್ಯೂಲ್ಡ್ ಕ್ಯಾಸ್ಟ್ ನಡುವೆ ಆಗಿರುವಂತಹ ಘಟನೆಯೂ ಅಲ್ಲ. ಆ ಊರಿನಲ್ಲಿ ಈ ಒಂದು ಘಟನೆಯಲ್ಲಿ ೫೫ ವರ್ಷ ವಯಸ್ಸಿನ ಜಗದೇವಪ್ಪ ಎಂಬುವವರನ್ನೂ ಹೊಡೆದಿದ್ದಾರೆ. ಗುತ್ತೆವ್ವನ ಮಗಳು ದ್ರೌಪದಿ ಎಂಬ ಹೆಣ್ಣುಮಗಳು ತಾಯಿ ಮನೆಗೆ ಬಂದಿದ್ದಳು. ಆಕೆಗೂ ಹೊಡೆದಿದ್ದಾರೆ. ಆಕೆಯ ೬ ತಿಂಗಳ ಮಗುವಿಗೂ ಹೊಡೆದಿದ್ದಾರೆ. ಗುತ್ತೆವ್ವ ಹಾಗೂ ಸಿದ್ದಪ್ಪ ಇಬ್ಬರಿಗೂ ಹೊಡೆದಿದ್ದಾರೆ. ಗುತ್ತವ್ವನ ಕೊಲೆಯಾಗಿದೆ. ಈ ಘಟನೆಯ ಬಗ್ಗೆ ಶ್ರೀಮಾನ್ ಖರ್ಗೆಯವರು ವಿವರಗಳನ್ನು ಈಗಾಗಲೇ ಹೇಳಿದ್ದಾರೆ. ಈ ಒಂದು ಘಟನೆಯನ್ನು ನಾನು ಅಲ್ಲಿಂದ ಬಂದ ಮೇಲೆ ಗೃಹ ಸಚಿವರಿಗೆ ದೂರವಾಣಿ ಮೂಲಕ ತಿಳಿಸಿದ್ದೇನೆ. ಈ ತರಹ ಅಮಾನುಷ ಘಟನೆ ಯಾಗಿದೆ. ಸ್ಥಳಕ್ಕೆ ಎಸ್.ಪಿ. ಯವರು ಹೋಗಿದ್ದಾರೆ. ಅಲ್ಲಿ ಸ್ಥಳೀಯ ಪೋಲೀಸ್ ಠಾಣೆಯಲ್ಲಿರತಕ್ಕ ಎಸ್. ಐ. ಬಹಳ ಒಳ್ಳೆಯವರು. ಅವರು ತಪ್ಪಿತಸ್ಥರು ಯಾರೇ ಇರಲಿ ಅವರನ್ನು ಹಿಡಿಯುತ್ತೇನೆಂದು ಹೇಳಿದ್ದಾರೆ. ಆದರೆ ಮಂಚ್ಯಮಂತ್ರಿಗಳ ಕಚೇರಿಯಿಂದ ದೂರವಾಣಿ ಹೋಗಿದೆ.

೩—೦೦ ಪಿ. ಎಂ.

ಇಲ್ಲೆ ಎಲ್ಲೋ ರೇಷ್ಮೆ ತೋಟದಲ್ಲಿ ಅಡಗಿದ್ದಾನೆ, ಆತನನ್ನು ಹಿಡಿಯುತ್ತೇವೆಂದು ಅಲ್ಲಿನ ಎಸ್.ಐ. ಹೇಳಿದರು. ಅಲ್ಲಿನ ಎಸ್.ಪಿ.ಯವರೂ ಸಹಾ ಮಹದೇವಪ್ಪನನ್ನು ಹಿಡಿದೇ ತೀರುತ್ತೇವೆಂದು ಹೇಳಿದ್ದಾರೆ. ಸರ್ಕಲ್ ಇನ್ಸ್‌ಪೆಕ್ಟರ್ ಸಹಾ ಹೇಳಿದ್ದಾರೆ. ಆವತ್ತು ಆ ರೀತಿ ಹರಿಜನ ಹೆಣ್ಣುಮಗಳ ಕೊಲೆ ಆದಮೇಲೆ, ಭೀಕರ ಪರಿಸ್ಥಿತಿ ಆದಮೇಲೆ ಶಂಕರ್ ಎನ್ನುವ ಬಿ.ಕಾಮ್. ಓದುವ ಹುಡುಗ ನನ್ನಲ್ಲಿ ಬಂದು ಸುದ್ದಿಯನ್ನು ಮುಟ್ಟಿಸಿದ್ದಾನೆ. ಏನಯ್ಯ ನೀನು ಎಂ.ಎಲ್.ಎ.ಗೆ ಹೇಳುತ್ತೀಯಾ, ಎಸ್.ಪಿ.ಯವರಿಗೆ ದೂರು ಕೊಡುತ್ತೀಯಾ ಎಂದು ಆತನನ್ನು ಹಿಡಿದುಕೊಂಡು ಹೊಡೆದಿದ್ದಾರೆ. ಇವತ್ತು ಆ ಪೋಲೀಸ್ ಸ್ಟೇಷನ್‌ನಲ್ಲಿ ಏನಾಗಿದೆ ಎಂದರೆ, ಅಲ್ಲಿ ಎಸ್.ಐ.ಗೆ ತನಿಖೆ ಮಾಡುವುದಕ್ಕೆ ಜವಾಬ್ದಾರಿ ವಹಿಸದೇ ಇರುವುದರಿಂದ ಇನ್ನೂ ಮಹದೇವಪ್ಪನನ್ನು ಅರೆಸ್ಟ್ ಮಾಡುವುದಕ್ಕಾಗಿಲ್ಲ. ಆ ಎಸ್.ಐ.ಯನ್ನು ಬಾದಾಮಿಗೆ ಸ್ಥಳಾಂತರ ಮಾಡಲಾಗಿದೆ. ಈ ರೀತಿಯಾದರೆ ಯಾವ ರೀತಿ ಸರ್ಕಾರ ನಡೆಸುತ್ತೀರಿ? ಯಾವ ರೀತಿ ತನಿಖೆಯನ್ನು ಮಾಡುತ್ತಿದ್ದೀರಿ ? ಈ ರೀತಿ ಅಲ್ಲಿ ಕೊಲೆ ಆಗಿರುವಾಗ ಗೃಹಮಂತ್ರಿಗಳು, ಜಿಲ್ಲಾಮಂತ್ರಿಗಳು ಕೂಡಾ ಅಲ್ಲಿಗೆ ಭೇಟಿ ಮಾಡಿಲ್ಲ, ಆಶ್ವಾಸನೆಯನ್ನು ಕೊಟ್ಟಿಲ್ಲ, ಧೈರ್ಯ ಕೊಟ್ಟಿಲ್ಲ. ಮಹದೇವಪ್ಪನಿಗೆ ಡಿಸ್ಟ್ರಿಕ್ಟ್ ಕೋರ್ಟ್‌ನಲ್ಲಿ ಬೇಲ್ ಸಿಗುತ್ತದೆ. ಆತ ಹೈಕೋರ್ಟಿಗೆ ಬರುತ್ತಿದ್ದಾನೆ. ೧೬ ವರ್ಷಗಳಿಂದ ಆ ಕ್ಷೇತ್ರ ಪ್ರತಿನಿಧಿಸುತ್ತಿರುವ ನಾನು ಯಾವುದೇ ಒಂದು ವಿಷಯದಲ್ಲೂ ಮಾಹಿತಿ ಇಲ್ಲದೇ ಆರೋಪ ಮಾಡುವುದಿಲ್ಲ. ನಿಮ್ಮ ಪಕ್ಷದ ಮುಖಂಡರು ಯಾರಿದ್ದಾರೋ ಅವರು ಆತನಿಗೆ ಆಶ್ರಯ ಕೊಡುತ್ತಿದ್ದಾರೆ. ಅವರ ಮುಖಾಂತರ ಆ ಎಸ್. ಐ. ಯನ್ನು ಸಹಾ ಟ್ರಾನ್ಸ್‌ಫರ್ ಮಾಡಲಾಗಿದೆ. ಈಗಾಗಲೇ ಮಾನ್ಯ ಖರ್ಗೆಯವರು ಹೇಳಿದಹಾಗೆ ಬೆಳಗಾಂನಲ್ಲಿ ಆದ ಪ್ರಕರಣವಾಗಲೀ, ಜೀವರ್ಗಿಯಲ್ಲಿ ಆದ ಪ್ರಕರಣವಾಗಲೀ ತನಿಖೆ ಮಾಡಲು ಸದನದ ಸಮಿತಿ ಹೋಗಬೇಕು. ಈ ಪ್ರಕರಣ ನಡೆದು ೨೪—೨೮ ದಿವಸಗಳಾದರೂ ಕೂಡಾ ಇಲ್ಲಿಯವರೆಗೆ ಏನು ಮಿದ್ದು ಗೃಹಮಂತ್ರಿಗಳು ತನಿಖೆ ಮಾಡಿಸಬೇಕಾಗಿತ್ತೋ ಅದನ್ನು ಮಾಡಿಲ್ಲ. ಇದು ಒಂದು ಸರ್ಕಾರಕ್ಕೆ ನಾಚಿಕೆಗೇಡಿನ ಸಂಗತಿಯಾಗಿದೆ. ಇವತ್ತು ಅಲ್ಲಿ ಹರಿಜನರ ಮೇಲೆ ದಬ್ಬಾಳಿಕೆ ನಡೆದು ಕೊಲೆ ನಡೆದಾಗ ಸರ್ಕಾರ ಆ ಕಡೆ ಹೋಗಬೇಕೆಂದು ಮನಸ್ಸು ಮಾಡಿಲ್ಲ ಎಂದರೆ ಸರ್ಕಾರ ನಡೆಸತಕ್ಕ ನಿಮಗೆ ಇದು ಶೋಭೆ ಅಲ್ಲ. ಇವತ್ತಿನದಿವಸ ಈ ಸರ್ಕಾರದಲ್ಲಿ ಹರಿಜನ ಗಿರಿಜನ ಹಾಗೂ ದುರ್ಬಲ ವರ್ಗದವರು ಏನಿದ್ದಾರೆ ಅವರಿಗೆ ಒಂದು ರಕ್ಷಣೆ ಇಲ್ಲ, ಇದು ಬಡವರ ಪರವಾಗಿರತಕ್ಕ ಸರ್ಕಾರ ಅಲ್ಲ, ಇದು ಬಡವರ ಸರ್ಕಾರ ಅಲ್ಲ ಎನ್ನತಕ್ಕಂತಹ ಒಂದು ವಾತಾವರಣ ಅಲ್ಲಿ ಉದ್ಭವವಾಗಿದೆ. ಇದೇ ರೀತಿಯಾಗಿ ಸರ್ಕಾರ ಕ್ರಮ ತೆಗೆದುಕೊಳ್ಳದೇ ಸುಮ್ಮನೆ ಕುಳಿತರೆ ಎಲ್ಲಾ ಕಡೆ ಇರುವ ಜನರು ಸುಮ್ಮನೆ ಕೂರುವುದಿಲ್ಲ. ತಾವು ಅಂಕಿಅಂಶಗಳ ಮುಖಾಂತರ ಏನು ಉತ್ತರವನ್ನು ಕೊಡುತ್ತೀರೋ ಅದಂ ನಮಗೆ ಸಮಾಧಾನ ತರುವುದಿಲ್ಲ. ರಾಜ್ಯದ ಗೃಹಮಂತ್ರಿಗಳು ನೇರವಾಗಿ ಅಲ್ಲಿಗೆ ಖಂದ್ದಾಗಿ ಹೋಗಿ

ಸಮೀಕ್ಷೆ ಮಾಡಿ ಕೊಲೆಗಾರರನ್ನು ಹಿಡಿದೇ ತೀರುತ್ತೇವೆನ್ನುವ ಖಂಡತುಂಡು ಉತ್ತರವನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಂಡು ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೆ, ವಿಷಯ ಬಹಳ ಗಂಭೀರವಾಗಿರತಕ್ಕ ವಿಚಾರ. ನಾನು ಇಂತಹ ವಿಷಯಗಳನ್ನು ಮೊಟ್ಟಮೊದಲನೆಯ ಬಾರಿಗೆ ಚರ್ಚೆ ಮಾಡುತ್ತಿಲ್ಲ. ಇಂತಹ ವಿಚಾರಗಳನ್ನು ಹಿಂದೆ ಕೂಡ ಚರ್ಚೆ ಮಾಡಿದ್ದೇವೆ. ಇಂತಹ ವಿಷಯಗಳ ಬಗ್ಗೆ ಚರ್ಚೆಯನ್ನು ಮಾಡತಕ್ಕ ಪ್ರವೃತ್ತಿ ಸ್ವಾತಂತ್ರ್ಯ ಬಂದಮೇಲೆ ಇಷ್ಟು ವರ್ಷಗಳಾದ ಮೇಲೆ ಇಂತಹ ಪರಿಸ್ಥಿತಿ ಉದ್ಭವವಾಗಿರತಕ್ಕದ್ದು ನಿಜವಾಗಿಯೂ ತಲೆತಗ್ಗಿಸಬೇಕಾದ ವಿಚಾರ. ಘಟನೆಗಳು ಎಲ್ಲೆ ನಡೆದಿರಲಿ ನಾವು ಎಂದೂ ಕೂಡ ನಾಚಿಕೆಪಡಬೇಕು, ತಲೆತಗ್ಗಿಸಬೇಕು. ನಾನು ಒಪ್ಪುತ್ತೇನೆ, ಒಂದು ಸಮಾಜದಲ್ಲಿ ಜನ ಸರಿಸಮಾನವಾಗಿದ್ದಾರೆ, ಹಕ್ಕುಬಾಧ್ಯತೆಗಳ, ಆಸ್ತಿಗಳ ಅಥವಾ ಆರ್ಥಿಕ ಸಮಾನತೆಯ ಜೊತೆಯಲ್ಲಿ ಜೀವನ ಮಾಡತಕ್ಕ ಒಂದು ಸಮಾನತೆ ಇದ್ದರೆ ಅದರಲ್ಲಿ ಒಬ್ಬ ಕನಿಷ್ಠನಾಗಿರತಕ್ಕವನು ಮತ್ತೊಬ್ಬ ಬಲಿಷ್ಠನ ಮೇಲೆ ಬಿದ್ದರೆ ತನ್ನ ಸಾರ್ವಭೌಮತ್ವವನ್ನು ಪ್ರತಿಷ್ಠೆ ಮಾಡಬೇಕಾದಂಥ ಪರಿಸ್ಥಿತಿ ಬರುವುದಕ್ಕೆ ಮತ್ತೊಬ್ಬನ ಮೇಲೆ ಧಾಳಿ ಮಾಡುತ್ತಿದ್ದಾರೆಂದು ಇಟ್ಟುಕೊಳ್ಳಬೇಕು, ನಾವು ಇಲ್ಲಿ ಪ್ರಸ್ತಾಪ ಮಾಡತಕ್ಕ ವಿಚಾರಧಾರೆ ಅವುಗಳಲ್ಲ. ಈ ರೀತಿಯಾಗಿ ಬಲಿಷ್ಠರಾದವರು ಬಹಳ ಕಳಪೆಯಾಗಿ ಸಣ್ಣ ವರ್ಗದ ಜನರನ್ನು ಕಾಣತಕ್ಕ ಪರಿಪಾಠ ಯಾವುದೇ ರಾಷ್ಟ್ರದಲ್ಲಿ ಇರಲಾರದು. ನಮ್ಮ ಬೃಹತ್ ರಾಷ್ಟ್ರದಲ್ಲಿ ಇದು ಇದೆ. ನಾವು ಇವತ್ತು ಹರಿಜನರ ಅಥವಾ ಸಮಾಜದಲ್ಲಿರತಕ್ಕ ದುರ್ಬಲವರ್ಗದವರನ್ನು ಕುರಿತು ಪದೇ ಪದೇ ಪ್ರಸ್ತಾಪ ಮಾಡುತ್ತೇವೆ. ಏತಕ್ಕಾಗಿ ಅಂದರೆ ರಾಜ್ಯಾಂಗದಲ್ಲಿ ಅವರಿಗೆ ಕೊಟ್ಟಿರತಕ್ಕ ಸವಲತ್ತುಗಳಂ ವಿಶೇಷವಾಗಿವೆ. ಆ ವರ್ಗದವರನ್ನು ಮೇಲಕ್ಕೆತ್ತಬೇಕು ಎನ್ನುವ ದೃಷ್ಟಿಯಿಂದ ನಾವು ಅವರಿಗೆ ಸರ್ಕಾರಿ ಸೇವೆಯಲ್ಲಿ ಪ್ರಾತಿನಿಧ್ಯ ಕೊಡುತ್ತಿದ್ದೇವೆ. ಆರ್ಥಿಕವಾಗಿ ಮೇಲಕ್ಕೆತ್ತಬೇಕು, ರಾಜ್ಯಾಂಗ ಬದ್ಧವಾಗಿ ಸರ್ಕಾರಗಳು ಕೂಡ ಕೆಲಸ ಮಾಡಬೇಕು. ಸರ್ಕಾರ ಈ ಬಗ್ಗೆ ನೀತಿ ನಿರೂಪಣೆ ಮಾಡಿ ಮೊದಲು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ರಾಜ್ಯಾಂಗ ಕೊಟ್ಟಿರತಕ್ಕ ಸವಲತ್ತುಗಳು ಏನಿವೆ ಅವುಗಳನ್ನು ಜಾರಿಗೆ ಕೊಡಬೇಕು. ಒಂದು ವೇಳೆ ಅವರಿಗೆ ನಾವು ಕೊಡತಕ್ಕ ಸವಲತ್ತುಗಳನ್ನು ಪ್ರಾಮಾಣಿಕವಾಗಿ ಕೊಡುತ್ತಾ ಬಂದಿದ್ದೇವೆ ಅಂದರೆ, ಅದರ ಫಲಿತಾಂಶ ಈ ವರ್ಗದ ಜನರಿಗೆ ಶೇಕಡಾವಾರು ತಲಂಪಿಪಿಯೇ ಎನ್ನತಕ್ಕದ್ದು ಬಹಳ ಮುಖ್ಯವಾದುದು. ನಾನು ಈ ಮಾತನ್ನು ಪೂರ್ವ ಪೀಠಿಕೆಯಾಗಿ ಏತಕ್ಕೆ ಮಾತನಾಡುತ್ತಿದ್ದೇನೆಂದರೆ, ಸಮಾಜದಲ್ಲಿ ಆರ್ಥಿಕ ಶಕ್ತಿವಂತರಿದ್ದರೆ ನಾವು ಅವರಿಗೆ ಗೌರವ ಕೊಡುತ್ತೇವೆ, ಸಹಜವಾಗಿ ನಮ್ಮಂತಹ ಸಮಾಜದಲ್ಲಿ ಅದು ಉದ್ಭವವಾಗುತ್ತದೆ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ ಹರಿಜನ ವರ್ಗಕ್ಕೆ ಸೇರಿದ ಒಬ್ಬ ತಹಶೀಲ್ದಾರರು ಇರುತ್ತಾರೆ. ಹಿಂದೆ ನಾವು ಕಂಡದ್ದು. ಸ್ವಾತಂತ್ರ್ಯ ಬಂದಮೇಲೆ ಅನೇಕ ಜನರ ಅವರವರ ಅನುಭವದಲ್ಲಿ ಅದು ಬಂದಿರುತ್ತದೆಂದು ನನ್ನ ಭಾವನೆ. ಅವನು ಹರಿಜನನೆಂಬ ಕಾರಣಕ್ಕೆ ಅವನು ತಾಲ್ಲೂಕಿನ ತಹಶೀಲ್ದಾರನಾಗಿದ್ದರೂ, ತಾಲ್ಲೂಕಿನಲ್ಲಿ ದೊಡ್ಡ ಅಧಿಕಾರಿಯಾಗಿದ್ದರೂ ಕೂಡ ಅವನನ್ನು ಸರಿಸಮಾನವಾಗಿ ಕಂಡು ಊಟದ ಪಂಕ್ತಿಯಲ್ಲಿ ಜೊತೆಯಲ್ಲಿ ಕೂಡಿಸತಕ್ಕ ಪರಿಪಾಠ ಅನೇಕ ಕಡೆ ನಡೆಯಲಿಲ್ಲ. ಇತ್ತೀಚೆಗೆ ನನಗೆ ಗೊತ್ತಿರುವ ಹಾಗೆ ಸಮಾನತೆಯ ಸಿದ್ಧಾಂತ, ಜಾತ್ಯಾತೀತ ರಾಷ್ಟ್ರದಲ್ಲಿ ಎಷ್ಟು ಕೆಳಮಟ್ಟಕ್ಕೆ ಹೋಗಿದೆ ಎನ್ನುವ ಸಿದ್ಧಾಂತದ ವಿಚಾರಧಾರೆಗೆ ಯಾವ ಬೆಲೆ ಇದೆ ? ವಿಚಾರಧಾರೆಯು ಚೌಕಟ್ಟಿನಲ್ಲಿ ಬರತಕ್ಕ ಜಾತಿಗಳು ಏನಿವೆ, ಜಾತಿಯನ್ನು ಬಿಟ್ಟು ಈ ವರ್ಗದವರನ್ನು ಎತ್ತಿಹಿಡಿಯತಕ್ಕದ್ದನ್ನು ನಾವು ಕಂಡಿದ್ದೇವೆ, ಇಲ್ಲವೆಂದು ಹೇಳುವುದಿಲ್ಲ.

ಉಚ್ಚವರ್ಗಕ್ಕೆ ಸೇರಿದ ಒಬ್ಬಾತ ಹರಿಜನ, ನಿಮ್ಮ ವರ್ಗಕ್ಕೆ ಸೇರಿದ ವ್ಯಕ್ತಿಯಮೇಲೆ ತನ್ನ ಬಹುಮತತ್ವವನ್ನು ಯಾವಾಗಲೂ ಸ್ಥಾಪನೆ ಮಾಡುತ್ತಾನೆ. ಇದು ಶತಶತಮಾನಗಳಿಂದ ನಡೆದುಬಂದಿರತಕ್ಕಂಥ ವಿಚಾರ. ಇದು ಇವತ್ತಿನದಲ್ಲ. ನೂರುವರ್ಷಗಳಿಂದ ಇದೆ. ಮಾನಸಿಕವಾಗಿ ಶತಶತಮಾನಗಳಿಂದ ತುಳಿತಕ್ಕೆ ಸಿಕ್ಕಿ ಜರ್ಜರಿತವಾದಂಥ ವರ್ಗಗಳು ಯಾವುದು ಇವೆ, ಆರ್ಥಿಕವಾಗಿ ಸ್ವಾತಂತ್ರ್ಯ ನಂತರ ಮುಂದುವರೆದರೂ ಕೂಡ ಮಾನಸಿಕವಾಗಿ ತನ್ನ ಸ್ಥಿತಿಯನ್ನು, ಹಕ್ಕುಬಾಧ್ಯತೆಗಳನ್ನು ಸಂವಿಧಾನದ ಚೌಕಟ್ಟಿನಲ್ಲಿ ಪ್ರತಿಪಾದನೆ ಮಾಡತಕ್ಕಂಥ ಸ್ವಂತಶಕ್ತಿ ಯಾವಾಗ ಒಬ್ಬ ವ್ಯಕ್ತಿಗೆ ಇಲ್ಲವೆಂದರೆ, ನಿಜವಾಗಿಯೂ ಆತ ಆರ್ಥಿಕವಾಗಿ ಮೇಲೆ ಬಂದರೂ ಕೂಡ ಏನೂ ಉಪಯೋಗ ಇಲ್ಲ, ಎಲ್ಲರೂ ಕೆಟ್ಟವರು ಎಂದು ನಾನು ಹೇಳುವುದಿಲ್ಲ. ಎಲ್ಲರೂ ಮಾಡುತ್ತಾರೆ ಎಂದು ಹೇಳುವುದಿಲ್ಲ. ಪಾಪ, ಒಳ್ಳೆ ಜನ ಎಲ್ಲಾ ಜಾತಿಯಲ್ಲೂ, ಎಲ್ಲಾ ವರ್ಗದಲ್ಲೂ ಇದ್ದಾರೆ. I am not generalising everyth–

ing. I know the limitations of this kind of argument. With those limitations in mind, I am advancing this argument. ಇವತ್ತು ಏನಾಗುತ್ತದೆ ಎಂದರೆ ಉಚ್ಚವರ್ಗದಲ್ಲಿ ಅನೇಕರೇ ತಮ್ಮ ಹಕ್ಕುಬಾಧ್ಯತೆಗಳ, ಬಹುಮತತ್ವವನ್ನು ಸ್ಥಾಪನೆ ಮಾಡುವುದಕ್ಕೆ ನೋಡಿದರೆ, ಯಾವ ಒಬ್ಬ ವ್ಯಕ್ತಿಮೇಲೆ ಇದು ನಡೆಯುತ್ತದೆ, ಇದರ ಪ್ರಹಾರವನ್ನು ತಡೆದು ಕೊಳ್ಳುವಂಥ ಶಕ್ತಿ ಅವನಿಗಾಗಲೀ, ಸಂಬಂಧಿಕರಿಗಾಗಲೀ ಅಥವಾ ಮಾನಸಿಕವಾದಸಿದ್ಧತೆಯಲ್ಲಿ ಇರುವುದರಿಂದ ಅದು ಅಷ್ಟು ಪರಿಣಾಮಬೀರುವುದಿಲ್ಲ. ಅದೇ ಒಬ್ಬ ಹರಿಜನ, ಗಿರಿಜನ ಅಥವಾ ನಿಮ್ನ ವರ್ಗಕ್ಕೆ ಸೇರಿದ ವ್ಯಕ್ತಿ ತಲೆಯೆತ್ತಿ ನಿಲ್ಲುವುದಕ್ಕೆ ಸಾಧ್ಯ ಇಲ್ಲ ಎನ್ನುವುದನ್ನು ಕಾಣುತ್ತೇವೆ. ಹಳ್ಳಿಗಾಡು ಪ್ರದೇಶದಲ್ಲಿ ಇವತ್ತು ಹೋಟೆಲುಗಳಿಗೆ ಹೋದರೆ ಅವರಿಗೆ ಚಿಪ್ಪಿನಲ್ಲಿ. ನಮ್ಮಲ್ಲಿ ಕರಟು ಚಿಪ್ಪು ಎಂದು ಹೇಳುತ್ತಾರೆ, ಅದರಲ್ಲಿ ಕಾಫಿ, ಟೀಯನ್ನು ತಂದುಕೊಡುತ್ತಾರೆ. ತಂದುಕೊಡುವುದಲ್ಲ, ಒಗಡೆಯಿಂದ ಅದಕ್ಕೆ ತಂದು ಸುರಿಯುತ್ತಾರೆ. ಈಗ ಕೆಲವು ಕಡೆ ಕಪ್ಪನ್ನೂ ಕೂಡ ಇಟ್ಟಿದ್ದಾರೆ. ಜರ್ಮನ್ ಸಿಲ್ವರ್ ಅಂತ ಏನು ಕರೆಯುತ್ತಾರೆ, ಅದರಲ್ಲಿ ಕೊಡುತ್ತಾರೆ. Actually it is not a silver or steel. ಅದು ಒಂದು ಬಗೆಯ ಅಲ್ಯುಮಿನಿಯಂ ರೀತಿ ಇರುತ್ತದೆ. ಅದರಲ್ಲಿ ಟೀ, ಕಾಫಿಯನ್ನು ಕೊಡುತ್ತಾರೆ. ಯಾವ ಒಬ್ಬ ವ್ಯಕ್ತಿ ಅದನ್ನು ಕುಡಿದ ನಂತರ ಕಪ್ಪನ್ನು ತೊಳೆದು ಸೂರಿಗೆ ಸಿಕ್ಕಿಸಿಬಿಟ್ಟು ಹೋಗುತ್ತಾನೆ. ಅವನ್ನು ಬೇರೆಯವರು ಮುಟ್ಟುವಹಾಗಿಲ್ಲ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಕೂಡ ಅವರು ತಾವು ಕುಡಿದ ನಂತರ ಲೋಟಗಳನ್ನು ಸೂರಿಗೆ ಸಿಕ್ಕಿಸಿ ಹೋಗತಕ್ಕಂಥ ಪರಿಸ್ಥಿತಿ ಇದೆ. ಈ ಲೋಟದ ವಿಚಾರಧಾರೆ ಏನಿದೆ, ಇದನ್ನು ಬೆಳೆಸಿ ಘೋಷಿಸತಕ್ಕಂಥ ಈ ಸಮಾಜ. I am explaining what exactly the things are going on almost daily. ಸರ್ಕಾರ ಏನು ಮಾಡಿದೆ ಎಂಬುದು ಮತ್ತೊಂದು ಭಾಗ. ಇನ್ನು ಈಗ ಇರತಕ್ಕಂಥ ಪರಿಸ್ಥಿತಿ. ಇಂತಹ ವರ್ಗಗಳಿಗೆ ಸೇರಿದಂಥ ಕಡುಬಡವರನ್ನು ಮೇಲಕ್ಕೆತ್ತಬೇಕೆನ್ನುವ ವಿಚಾರದಲ್ಲೇ ನಾವು ಇನ್ನೂ ಇದ್ದೇವೆ ಅದನ್ನು ಇನ್ನೂ ಕೂಡ ಪ್ರಾರಂಭ ಮಾಡಿದ್ದೇವೆ. ಸ್ವಾತಂತ್ರ್ಯ ಬಂದು ೪೦ ವರ್ಷಗಳು ಕಳೆದುಹೋದವು. ಮುಂದೆ ಪರಿಸ್ಥಿತಿ ಏನು ? ಈಗಾಗಲೇ ಮಾನ್ಯ ಖಾರ್ಗೆಯವರು ಹಾಗೂ ಮಾನ್ಯ ಧರ್ಮಸಿಂಗ್‌ರವರೂ ಹೇಳಿರತಕ್ಕ ವಿವರಗಳನ್ನು ನಾನು ಪ್ರಸ್ತಾಪ ಮಾಡದಿದ್ದರೂ ಕೂಡ ಬೆಳಗಾಂ ಜಿಲ್ಲೆಯ ಬೆಂಡಿಗೇರಿಯಲ್ಲಿ ನಡೆದ ಪ್ರಕರಣವನ್ನು ತೆಗೆದಂ ಕೊಂಡರೆ, ಬೇಕಾದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಿ. ಅಧಿಕಾರಿಗಳಿಗೆ ಹೇಳಲಿ. ಪೋಲೀಸ್‌ಗೆ ಕಂಪ್ಲೇಂಟ್ ಕೊಡಲಿ. ಕೋರ್ಟಿಗೆ ಹೋಗಲಿ, ಏನು ಬೇಕಾದರೂ ಮಾಡಿಕೊಳ್ಳಲಿ.

ಇವತ್ತು ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ಬೇಕಾದಷ್ಟು ದಾರಿಗಳು ಇವೆ. ಜಾತಿಯ ಹೆಸರಿನಲ್ಲಿ, ಮಾನಸಿಕವಾಗಿ ಬಹಳ ದೊಡ್ಡವರು ಎನಿಸಿಕೊಂಡಿರತಕ್ಕ ವರ್ಗಗಳು ಹರಿಜನ ಕೋಮಿನವರಿಗೆ ಮಲ ತಿನ್ನಿಸುವುದು, ಅವರು ತಿನ್ನದೇ ಇದ್ದರೆ ಉಳಿಗಾಲವಿಲ್ಲ ಎನ್ನತಕ್ಕಂಥ ತೀರ್ಮಾನಕ್ಕೆ ಬಂದಿರಬೇಕಾದರೆ ಯಾವರೀತಿಯ ಪರಿಸರದ ಸೃಷ್ಟಿ ಆಗಿರಬಹುದು ಎಂಬುದನ್ನು ಗಮನಿಸಬೇಕಾಗುತ್ತದೆ ಹಿಂದೆ ಕೂಡ ಇದೇರೀತಿಯ ವಿಚಾರಧಾರೆಗಳು ಬಂದಿವೆ. ಡಾ॥ ತಿಪ್ಪೇಸ್ವಾಮಿಯವರ ಅಧ್ಯಕ್ಷತೆಯಲ್ಲಿ ಇರತಕ್ಕ ಸಮಿತಿಯಂ ಕೂಡ ಹೋಗಿ ಬಂತು. ಹಿಂದೆ ಕೂಡ ಇದೇ ವಿಧಾನ ಸಭೆಯಲ್ಲಿ ಹತ್ತಾರು ಸಾರಿ ಪ್ರಸ್ತಾಪ ಮಾಡಿದ್ದೇವೆ. ಸ್ವಲ್ಪ ವ್ಯತ್ಯಾಸ ಆಗಿಬಿಟ್ಟರೂ ಕೈಕಾಲು ಮುರಿದಿರತಕ್ಕಂಥ ಘಟನೆಗಳು, ಮಾಭಂಗ ಆಗಿರತಕ್ಕಂಥ ಘಟನೆಗಳು, ಜೀವ ಹೋಗಿರತಕ್ಕಂಥ ಘಟನೆಗಳು ನಡೆದಿರುತ್ತವೆ. ಸರ್ಕಾರ ಕೊಟ್ಟ ಜನತಾ ಮನೆಗಳು ಲೂಟಿ ಆಗಿರತಕ್ಕಂಥ ಪ್ರಕರಣಗಳನ್ನು ನಾವು ನೋಡಿದ್ದೇವೆ. ಇವತ್ತು ಸರ್ಕಾರ ಮನೆ ಕಟ್ಟಿಕೊಟ್ಟರೆ, ಅದನ್ನು ಲೂಟಿ ಮಾಡತಕ್ಕಂಥ ಒಂದು ವರ್ಗ ಸೃಷ್ಟಿಯಾಗಿದೆ. ಇಂಥಹ ದುಷ್ಟ ಶಕ್ತಿಗಳನ್ನು ನಿಗ್ರಹ ಮಾಡತಕ್ಕಂಥ ಶಕ್ತಿ, ಯಾವ ಸರ್ಕಾರಕ್ಕೆ ಇರುವುದಿಲ್ಲ, ಅಲ್ಲಿಯವರೆಗೆ ಈ ಒಂದು ವಿಚಾರಧಾರೆಗಳು ಕೂಡ ತಲೆ ಎತ್ತಿ ನಿಲ್ಲುವುದಕ್ಕೆ ಸಾಧ್ಯವಾಗುತ್ತದೆ. ಈ ವಿಚಾರದ ಪೂರ್ವ ಪೀಠಿಕೆಯನ್ನು ಹಾಕಿದ ಮೇಲೆ ಸರ್ಕಾರದ ಜವಾಬ್ದಾರಿ ಏನು ? ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬುದನ್ನು ವಿಚಾರ ಮಾಡಬೇಕಾಗುತ್ತದೆ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ, ಶ್ರೀಮಾನ್ ಬಿ. ರಾಚಯ್ಯನವರು ಗೃಹಮಂತ್ರಿಗಳಾಗಿದ್ದರು. ಆಗ ನಾನು ೪೦-೫೦ ಜನರು ಇರತಕ್ಕಂಥ ಒಂದು ದೊಡ್ಡ ಪಟ್ಟಿಯನ್ನು ಕೊಟ್ಟೆ. ಫೋಟೋಗಳನ್ನೂ ಕೂಡ ಕೊಟ್ಟೆ. ಹರಿಜನ ಎಂಬ ಒಂದೇ ಒಂದು ಕಾರಣಕ್ಕಾಗಿ ಹಲ್ಲೆಗಳಾಗಿವೆ ಎಂದು ಹೇಳಿದೆ ನಾನು ಸರ್ಕಾರದಲ್ಲೂ ಇದ್ದು ಕೆಲಸ ಮಾಡಿದ್ದೇವೆ, ಶಾಸನ ಸಭಾ ಸದಸ್ಯನಾಗಿಯೂ ಕೆಲಸ ಮಾಡಿದ್ದೇನೆ. ಎಲ್ಲೇ ಇರಲಿ

ಸಮಾಜದ ಒಂದು ಭಾಗವಾಗಿ ಮಾತನಾಡಬೇಕಲ್ಲ. ಜನಸಾಮಾನ್ಯನಾಗಿಯೂ ಮಾತನಾಡ ಬೇಕಾಗುತ್ತದೆ. ಇಂತಹ ಒಂದು ಹಿನ್ನೆಲೆಯಲ್ಲಿ ನಾನು ಅವರಿಗೆ ಹೇಳಿದ್ದೇನೆ. ಮೊದಲು ಕಾರ್ಯಕ್ರಮ ಹಾಕಿ. ಅವರು ಯಾರೇ ಇರಬಹುದು. ಅಸ್ಯೆಯವಾಗಿ ಫಿರ್ಯಾದಿಗಳನ್ನು ದೊಡ್ಡವರ ಮೇಲೆ ಕೊಡತಕ್ಕಂಥ ದೂರುಗಳನ್ನು ಅಸತ್ಯವಾಗಿ ಕೊಡತಕ್ಕಂಥ ಶಕ್ತಿ ಈ ನಿಮ್ನ ವರ್ಗದವರಲ್ಲಿ ಬಂದಿಲ್ಲ. ಅಂತಹವರು ಯಾರಾದರೂ, ನಿಮ್ನ ವರ್ಗದವರಲ್ಲಿ ಇದ್ದರೆ, ಒಂದು ಲಕ್ಷಕ್ಕೆ ಒಬ್ಬರು ಇರಬಹುದು. ಇವನು ಪೆಟ್ಟು ತಿಂದರೂ ಕೂಡ, ದೊಡ್ಡವರು ಹೇಳಿದ್ದಾರಪ್ಪ ನಾನು ಮನೆಗೆ ಹೋಗುತ್ತೇನೆ ಎಂದು ಹೇಳುತ್ತಾನೆ. ತಪ್ಪು ಮಾಡಿದವರಿಗೆ, ಏನು ಶಿಕ್ಷೆ ಕೊಡಬೇಕೆಂಬುದನ್ನು ಕೇಳುವುದಕ್ಕೆ ಅವನಿಗೆ ನಾಲಿಗೆ ಇಲ್ಲದಂತಾಗಿದೆ. ಇವತ್ತು ಸರ್ಕಾರ ಇದ್ದರೂ ಕೂಡ ತಿರುಗಿ ಮಾತನಾಡಲು ಸಾಧ್ಯವಿಲ್ಲದೇ ಇರತಕ್ಕ ವರ್ಗಗಳು ಏನಿವೆ, ಆ ಹರಿಜನ ಗಿರಿಜನರಿಗೆ ಬಾಯಿ ಕೊಡುವಂಥ ಕೆಲಸವನ್ನು ಸರ್ಕಾರ ಮಾಡ ಬೇಕಾಗಿದೆ. ಆತನು, ತನ್ನ ಗೋಳಿನ ಕತೆಯನ್ನು ಗುಟ್ಟಗುಟ್ಟಾಗಿ ಹೇಳತಕ್ಕಂಥ ಪರಿಸರವನ್ನು ನಾವು ಕಂಡಿದ್ದೇವೆ. ಇವತ್ತು ಕಾನೂನು ಪ್ರಕರಣವಾಗಿ ಯಾವ ಅಧಿಕಾರಿ ಮುಂದೆ ತನ್ನ ನೋವನ್ನು ಇಡಬೇಕು. ಅಥವಾ ಹೇಳಿಕೊಳ್ಳಬೇಕೋ, ಈತನಿಗೆ ಬಾಯಿ ಇದ್ದರೂ ಕೂಡ ಬಾಯಿ ಬಿಡುವುದಕ್ಕಾಗುತ್ತಿಲ್ಲ. ಆದ್ದರಿಂದ, ಇವರಿಗೆ ಬಾಯಿ ಕೊಡತಕ್ಕ ಸರ್ಕಾರ ನಮಗೆ ಬೇಕು. ಅಂತಹ ಸರ್ಕಾರ ಎಲ್ಲಿಯವರೆಗೆ ಬರುವುದಿಲ್ಲ, ಅಲ್ಲಿಯವರೆಗೆ, ಶತ ಶತಮಾನಗಳಿಂದ ಬಂದಿರತಕ್ಕ ಈ ವರ್ಗವನ್ನು ಮೇಲಕ್ಕೆ ಎತ್ತಲು ಆಗುವುದಿಲ್ಲ, ಸಮಾಜದಲ್ಲಿ ತುಳಿಯುವ ಸಂದರ್ಭ ಬಂದರೆ. ಅವನನ್ನು ಬಲಿ ಹಾಕುತ್ತಾರೆ. ಕಾನೂನು ಪ್ರಕಾರ ಕಾರ್ಯಕ್ರಮ ಕೈಗೊಳ್ಳುತ್ತಾರೆ, ಹಾಗೆಯೇ ಬಿಡುವುದಿಲ್ಲ. ಇವನ ಮೇಲೆ ಸಂಪೂರ್ಣವಾಗಿ ದೌರ್ಜನ್ಯವಾದರೂ, ನಾಳೆ ಮಂತ್ರೊಬ್ಬರ ಮೇಲೆ ಹಾಕತಕ್ಕಂಥ ಕಂಟಕ ಪ್ರಾಯದ ಸಮಾಜದ್ರೋಹಿಗಳು, ಸೃಷ್ಟಿಯಾಗಿ, ನಿರ್ಮಾಣವಾಗಿ ನಿಂತಿರಂತ್ತಾರೆ.

ಕರ್ನಾಟಕ ರಾಜ್ಯದ ಬಗ್ಗೆ ಮಾತನಾಡುತ್ತಿರುವುದು ಏತಕ್ಕೆ ಎಂದರೆ, ಇಲ್ಲಿರತಕ್ಕ ಕರ್ನಾಟಕ ರಾಜ್ಯ ವಿಫಲತೆಯಿಂದ ಇಂತಹ ಪರಿಸ್ಥಿತಿ ಉದ್ಭವವಾಗುತ್ತಿರಬೇಕಾದರೆ, ಇವತ್ತು ಜನರಿಂದ ಆರಿಸಲ್ಪಟ್ಟ, ಬಹುಮತದ ಆಧಾರದ ಮೇಲೆ ಸೃಷ್ಟಿಗೊಂಡಿರತಕ್ಕಂಥ ನಿಮ್ಮ ಸರಕಾರ ಯಾವ ಕಾರ್ಯಕ್ರಮ ಹಾಕಿದ್ದೀರಿ ಎಂದು ಕೇಳುತ್ತೇನೆ. ಸಿವಿಲ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಸೆಲ್ ಇದೆ, ಹೌದು. ಆದರೆ ಒಂದು ಹೇಳುತ್ತೇನೆ, ಈ ಸಿವಿಲ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಸೆಲ್ ಇರಬಹುದು ಪೋಲೀಸ್ ಇಲಾಖೆ ಇರಬಹುದು. ಅಥವಾ ದೊಡ್ಡ ದೊಡ್ಡ ಅಧಿಕಾರಿಗಳು ಇದಕ್ಕೆ ಸೇರಿರತಕ್ಕವರು ಇರಬಹುದು. ಸರಕಾರ, ಮಂತ್ರಿಗಳು, ಮತ್ತೊಂದು ಇವೆಲ್ಲಾ ನಾವೇ ನಿರ್ಮಾಣ ಮಾಡಿಕೊಂಡಿರತಕ್ಕಂಥ ವ್ಯವಸ್ಥೆಗಳು. ಇಷ್ಟು ವರ್ಷದ ಮೇಲೂ ನಾವು ನೋಡಿದಾಗ ಇವೆಲ್ಲಾ ಟೇಲ್‌ಎಂಡ್ ಎರರ್ ಮೆಥಡ್ಸ್ ಆಗಿವೆ. ಮಂತ್ರಿಮಂಡಲ ಮಾಡುವುದರ ಬಗ್ಗೆ ನಾನು ಹೇಳುವುದಿಲ್ಲ, ಆದರೆ ನಾವು ಹಾಕಿಕೊಂಡಿರತಕ್ಕ, ಕಾನೂನಿನ ಚೌಕಟ್ಟಿನಲ್ಲಿ ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳು ಟೇಲ್ ಎಂಡ್ ಎರರ್ ಮೆಥಡ್ ಆಗಿದೆ. ನಾವೂ, ನೀವೂ ಈ ವಿಚಾರಧಾರೆಯ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳನ್ನು ಬದಲಾವಣೆ ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಇವರಿಗೆ ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ. ಚಾಲಪ್ಪನವರು ಹೊಸದಾಗಿ ಗೃಹಸಚಿವರಾಗಿದ್ದಾರೆ. ಹಿಂದೆ ರಾಚಯ್ಯನವರು ಇದ್ದರು. ನಮ್ಮ ಸರಕಾರ ಇದ್ದಾಗಲೂ ಕೂಡಾ ಚಾಲಪ್ಪನವರು ಸಚಿವ ರಾಗಿದ್ದರು ಆಗ ಘಟನೆಗಳು ನಡೆದಿಲ್ಲ ಎಂದು ನಾನು ಹೇಳುವುದಿಲ್ಲ. ಇದರಲ್ಲಿ ಮುಚ್ಚಿಟ್ಟು ಮಾತನಾಡುವ ಅವಶ್ಯಕತೆ ಇಲ್ಲ. ಇಂತಹ ಘಟನೆಗಳು ನಡೆದಾಗ, ಈ ವರ್ಗದವರಿಗೆ ರಕ್ಷಣೆ ಕೊಡತಕ್ಕಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಸರಕಾರ ತೀವ್ರವಾಗಿ ಮತ್ತು ಎಷ್ಟೊಂದು ಪರಿಣಾಮಕಾರಿಯಾಗಿ ಕಾರ್ಯಕ್ರಮಗಳನ್ನು ಹಾಕಬೇಕಾಗುತ್ತದೋ ಅಷ್ಟನ್ನು ಹಾಕದಿದ್ದರೆ, ಸರಕಾರ ತನ್ನ ಕಾರ್ಯಕ್ರಮದಲ್ಲಿ ವಿಫಲಗೊಳ್ಳುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಈ ವಿಫಲತೆಯ ಹಿನ್ನೆಲೆಯಲ್ಲಿ, ಕಾರ್ಯಕ್ರಮದ ಹಿನ್ನೆಲೆಯಲ್ಲಿ ನಾವು ವಿಚಾರ ಮಾಡಿದಾಗ ನನಗನ್ನಿಸಂತ್ತದೆ. ತುಳಿತಕ್ಕೆ ಸಿಕ್ಕಿರತಕ್ಕ ವರ್ಗಗಳಿಗೆ ಧೈರ್ಯವನ್ನು ಮಾನಸಿಕವಾಗಿ ತುಂಬತಕ್ಕಂಥ ವಿಚಾರ ದಲ್ಲಿ ನೀವು ಎಳ್ಳಷ್ಟಾ ಕೂಡಾ ಮುಂದುವರಿಯಲಿಲ್ಲ ಎಂದು. ಇದರ ಬಗ್ಗೆ ತಾವು ವಿಚಾರ ಮಾಡಿ ಬಿಡಿ, ನಾವು ಪ್ರಶ್ನೆ ಕೇಳಬಹುದು, ನೀವು ಉತ್ತರ ಕೊಡಬಹುದು, ಮತ್ತೊಂದು ಇರಬಹುದು. ಆದರೆ ನೀವು ಒಬ್ಬರೇ ಕುಳಿತುಕೊಂಡು ವಿಚಾರ ಮಾಡಿ, ಒಬ್ಬ ಮಿನಿಸ್ಟರ್ ಆಗಿ ನೀವು ಕುಳಿತುಕೊಂಡು ವಿಚಾರಮಾಡಿ ಮಂತ್ರಿಮಂಡಲದ ಒಬ್ಬ ಸದಸ್ಯರಾಗಿ ನೀವು ವಿಚಾರ ಮಾಡಿ, ಹೋಮ್ ಮಿನಿಸ್ಟರ್ ಆಗಿ ನೀವು ವಿಚಾರ ಮಾಡಿ, ನಾವು

ಈ ವರ್ಗಗಳಿಗೆ ರಕ್ಷಣೆ ಕೊಡತಕ್ಕಂಥ ಕೆಲಸ ಮಾಡಿದ್ದೇವೆಯೇ, ಇವರಿಗೆ ರಕ್ಷಣೆ ಕೊಡುವುದಕ್ಕೆ ಸಾಧ್ಯವಾಗಿದೆಯೇ ಎಂದು ವಿಚಾರ ಮಾಡಿ. ಈ ಅನ್ಯಾಯವು ಎಷ್ಟು ವರ್ಷಗಳು ನಡೆಯಬೇಕು? ಇಂತಹ ಸಮಯದಲ್ಲಿ, ಹರಿಜನರ ಕರಿಯಣ್ಣ ನೀನು ಹೆದರಬೇಡಿ, ದುರ್ಗಮ್ಮ ನೀನು ಹೆದರಬೇಡ, ಮುದ್ದಮ್ಮ ನೀನು ಹೆದರಬೇಡ ನಾವು ಇದ್ದೇವಿ ಎಂದು ಹೇಳತಕ್ಕಂಥ ಹೃದಯ ಶ್ರೀಮಂತಿಕೆ ಸರಕಾರಕ್ಕೆ ಇರಬೇಕು. ಇವತ್ತು ಅವರಿಗೆ ಕೈ ಇದೆ, ಅಕ್ಷರ ಇಲ್ಲ. ಅಕ್ಷರ ಜ್ಞಾನ ಇರತಕ್ಕಂಥ ಎಷ್ಟು ಜನ ಇದ್ದಾರೆ. ನಮಗೆಲ್ಲಾ ಗೊತ್ತಿರುವ ಹಾಗೆ ಅಕ್ಷರ ಜ್ಞಾನ ಇಲ್ಲದೆ, ಕಂಪ್ಲೇಂಟ್ ಬರೆದು ಫಿರ್ಯಾದನ್ನು ಕೊಡತಕ್ಕಂಥ ಶಕ್ತಿಯನ್ನು ಕಳೆದುಕೊಂಡಿರತಕ್ಕಂಥ ವರ್ಗಗಳು ಇವೆ. ನಡೆದಿರತಕ್ಕಂಥ ವಿಚಾರವನ್ನು ಹೇಳುವುದಕ್ಕೂ ಸಾಧ್ಯ ಇಲ್ಲ ಬರೆದುಕೊಡುವುದಕೂ ಸಾಧ್ಯ ಇಲ್ಲ, ಎಂದರೆ ಇಂತಹ ವರ್ಗಗಳ ಪರಿಸ್ಥಿತಿ ಏನಾಗ ಬೇಕು. ಅದರ ಅರ್ಥ ಇವರು ಕೈ ಇದ್ದರೂ ಕೂಡಾ ಕೈ ಇಲ್ಲದಿರತಕ್ಕ ಜನರಾಗಿದ್ದಾರೆ. ಕೈ ಇದೆ, ಅನ್ನುತಿನ್ನುವುದಕ್ಕೆ ಇದೆ. ಇನ್ನೊಬ್ಬರನ್ನು ಕಾಡಿ ಬೇಡುವುದಕ್ಕೆ ಇದೆ. ಆದರೆ ತಮ್ಮ ಹಕ್ಕನ್ನು ಬರೆದುಕೊಡುವುದರ ಮೂಲಕ ಪ್ರತಿಪಾದನೆ ಮಾಡಲಿಕ್ಕೆ ಫಿರ್ಯಾದನ್ನು ಬರೆದು ಕೊಡುವುದಕ್ಕೆ ಆ ಕೈಗಳು ಇಲ್ಲ. ಇವತ್ತು ಹರಿಜನ ಗಿರಿಜನರ ಮೇಲೆ ನಡೆಯತಕ್ಕ ದೌರ್ಜನ್ಯದ ಬಗ್ಗೆ ನಾವು ಮಾತನಾಡಿದರೂ ಕೂಡಾ, ಅವರು ಕೇವಲ ವರ್ಗದ ಹೆಸರಿನ ಪಟ್ಟಿಯನ್ನು ಪಡೆದಿರತಕ್ಕಂಥ ವರ್ಗವಾಗಿಲ್ಲ. ಇವು ಆರ್ಥಿಕವಾಗಿ ದುರ್ಬಲವಾಗಿರತಕ್ಕ ವರ್ಗಗಳಾಗಿವೆ. ಸಮಾಜದಲ್ಲಿ ಯಾವುದೇ ಲೆಕ್ಕಕ್ಕೆ ಬಾರದೇ ಇರತಕ್ಕ ವರ್ಗಗಳಾಗಿವೆ. ಚುನಾವಣೆಯಕಾಲ ಒಂದನ್ನು ಬಿಟ್ಟರೆ, ಅದು ಲೋಕಸಭಾ ಚುನಾವಣೆ ಇರಬಹುದು, ಶಾಸನಸಭಾ ಚುನಾವಣೆ ಇರಬಹುದು, ಮಂಡಲ್ ಪಂಚಾಯತ್ ಚುನಾವಣೆ ಇರಬಹುದು, ಜಿಲ್ಲಾ ಪರಿಷತ್ ಚುನಾವಣೆ ಇರಬಹುದು, ಇವುಗಳಂ ಮತವನ್ನು ಕೊಡತಕ್ಕಂಥ ಕೈಗಳಾಗಿ ಉಳಿದಿವೆಯೇ ವಿನ: ಆಗಿರತಕ್ಕಂಥ ಅನ್ಯಾಯವನ್ನು ತಡೆದುಕೊಳ್ಳತಕ್ಕಂಥ ಕೈಗಳಾಗಿ ಉಳಿದಿಲ್ಲ. ಫಿರ್ಯಾದಿಯನ್ನು ಕೊಡತಕ್ಕಂಥ ಕೈಗಳಾಗಿ ಉಳಿದಿಲ್ಲ. ಇಂತಹ ವರ್ಗಗಳಿಗೆ ಸರ್ಕಾರ ಕೈಯಾಗಬೇಕು. ಇಂತಹ ವರ್ಗಗಳಿಗೆ ಬಾಯಿ ಇಲ್ಲದಿದ್ದರೆ ಬಾಯಿ ಆಗಬೇಕು, ಕೈ ಇಲ್ಲದಿದ್ದರೆ ಕೈಯಾಗಬೇಕು ಎನ್ನುವಂತಹ ಸರಕಾರ ನಿಜವಾದ ವಿಚಾರಧಾರೆಯನ್ನುಳ್ಳ ಸರಕಾರ ಇಂತಹ ಒಂದು ವಿಚಾರಧಾರೆ, ಕಾರ್ಯಕ್ರಮ ರೂಪಿಸಿ ಜಾರಿಗೆ ಕೊಟ್ಟು ಇಂತಹ ವರ್ಗಗಳಿಗೆ ನಾವು ಇದ್ದೇವೆ ಎಂದು ಸರಕಾರ ಹೇಳಬೇಕು, ಇವರಿಗೆ ರಕ್ಷಣೆ ಕೊಡಬೇಕು. ಇವರ ಮೇಲಿನ ದೌರ್ಜನ್ಯಗಳನ್ನು ದೂರ ಇಡತಕ್ಕ ಒಂದು ವಿಚಾರ ನಮ್ಮ ಸರಕಾರಕ್ಕೆ ಬೇಕಾಗಿದೆ. ನಾನು ಒಪ್ಪುತ್ತೇನೆ, ಇದು ಇಲ್ಲ ಎಂಬ ಮಾತನ್ನು ಇವತ್ತು ಯಾರೂ ಹೇಳಲಿಲ್ಲ. ಕೇಂದ್ರ ಸರಕಾರವೂ ಇದೇ ಮಾತನ್ನು ಹೇಳುತ್ತಿದೆ. ಬಿಹಾರ ಸರಕಾರವೂ ಇದೇ ಮಾತನ್ನು ಹೇಳುತ್ತಿದೆ. ಈ ಸರಕಾರ ಕೂಡಾ ಇದೇ ಮಾತನ್ನು ಹೇಳುತ್ತಿದೆ. ನಾವು ಇದು ಎಷ್ಟು ದಿವಸ ನಡೆಯಬೇಕು? ನಾನು ನಿಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೇ ೨೯–೮೭ ರಾತ್ರಿ ೮–೩೦ ಬೆಳಗ್ಗೆ ಹಿರಿಯೂರಿನಲ್ಲಿ ಒಂದು ಘಟನೆ ನಡೆದಿದೆ. ಮಾನ್ಯ ರಾಮಯ್ಯನವರೂ ಇಲ್ಲಿದ್ದಾರೆ. ಆದಿನ ಹಿರಿಯೂರು ತಾಲ್ಲೂಕು ಪಟ್ರಹಳ್ಳಿಯಲ್ಲಿ ನಡೆದಿರತಕ್ಕಂಥ ಲಕ್ಷ್ಮೀಬಾಯಿ ಕೋಮಲ್ ಸೇವಾನಾಯಕ ಎಂಬ ಒಬ್ಬ ಹೆಣ್ಣುಮಗಳ ವಿಚಾರ. ಇವರು ಲಂಬಾಣಿ ಹೆಣ್ಣುಮಗಳು. ಈ ವರ್ಗದೊಳಗೆ ಇನ್ನೂ ಕೂಡ ಕಟ್ಟಿಗೆ ಹೊತ್ತುಕೊಂಡು ಬಂದು ಮಾರಾಟ ಮಾಡಿಕೊಂಡು ಜೀವನ ಮಾಡತಕ್ಕಂಥ ಜನರಿದ್ದಾರೆ. ಅವರಿಗೆ ಬೇರೆ ಯಾವ ದೊಡ್ಡ ಆಸ್ತಿಯನ್ನು ಮಾಡಿಕೊಟ್ಟಿದ್ದೇವೆ ನಾವು, ಯಾವ ಉದ್ಯೋಗ ಹಂಚಿದ್ದೇವೆ. ಬೆಳಕರೆದರೆ ತಕ್ಷಣ ಉತ್ಪನ್ನ ಬರುವಹಾಗೆ ಯಾವ ವ್ಯವಸ್ಥೆಯನ್ನು ಆ ಸಂಸಾರಗಳಿಗೆ ಮಾಡಿಕೊಟ್ಟಿದ್ದೇವೆ. ಹಿರಿಯೂರು ಎಂದರೆ ನಮ್ಮ ಮಲೆನಾಡಿನ ಭಾಗದ ಹಾಗೆ ಅಲ್ಲ, ಅಲ್ಲಿ ಕಟ್ಟಿಗೆಯೂ ಸಿಗುವುದಿಲ್ಲ, ಸೌದೆ ಆರಿಸಿಕೊಂಡು ಬರಬೇಕು. ಹೆಣ್ಣು ಮಕ್ಕಳು, ಚಿಕ್ಕ ಚಿಕ್ಕ ಮಕ್ಕಳು ಹೋಗಿ ಕಟ್ಟಿಗೆ ಆರಿಸುತ್ತಾರೆ. ಆದರಿಂದ ಒಂದೆರಡು ರೂಪಾಯಿ ಸಿಕ್ಕಿದರೆ ಜೀವನ ಮಾಡತಕ್ಕ ಪರಿಸ್ಥಿತಿ ಇದೆ. ಆ ಚರಿತ್ರೆಗೆ ಈ ಸಂದರ್ಭದಲ್ಲಿ ನಾನು ಹೋಗುವುದಿಲ್ಲ. ಇಂತಹ ಹೆಣ್ಣುಮಗಳನ್ನು ಹಿಡಿದುಕೊಂಡು ಅತ್ಯಾಚಾರ ಮಾಡಿದ್ದಾರೆ. ಅದೂ ಸಾಮೂಹಿಕವಾಗಿ ಅತ್ಯಾಚಾರ ಮಾಡಿದ್ದಾರೆ, ಸುಮಾರು ನಾಲ್ಕೈದು ಜನರು.

ಉಪಾಧ್ಯಕ್ಷರು.— ಮಾನ್ಯ ಬಂಗಾರಪ್ಪನವರೇ, ಮಾನ್ಯ ರಾಮಯ್ಯನವರೂ ಮಾತನಾಡುವವರಿದ್ದಾರೆ. ಟೈಮ್ ರಿಸ್ಟ್ರಿಕ್ಟ್ ಮಾಡಿ.

ಶ್ರೀ ಎಸ್. ಬಂಗಾರಪ್ಪ.—೨-೯-೮೭ ರಲ್ಲಿ ಆಗಿರತಕ್ಕದ್ದು. ಸಾಮೂಹಿಕ ಅತ್ಯಾಚಾರ ಮಾಡಿದ್ದಾರೆ. ಅದೇ ಗ್ರಾಮಕ್ಕೆ ಸೇರಿದ ಕಂದಸ್ವಾಮಿಗೌಡರ ಜವಿನಾನ ಭಾಗದಲ್ಲಿ ಸೌದೆ ಆರಿಸುತ್ತಿದ್ದಾಗ ಮೆಲ್ಕಂಡ ಗ್ರಾಮದ ಜನಗಳಾದ, ಮಣಿ, ಪಳನಿಸ್ವಾಮಿ, ಕಂದಸ್ವಾಮಿ, ಸುಂದರ್ ಇತ್ಯಾದಿ ಇತ್ಯಾದಿಗಳು, ಯಾರೇ ಇರಬಹುದು ಮಾಡಿದ್ದಾರೆ. ಇವರ ಬಗ್ಗೆ ಕಂಪ್ಲೇಂಟ್ ತೆಗೆದುಕೊಂಡು, ಎಫ್. ಐ. ಆರ್. ಕಳುಹಿಸಿ, ಕೋರ್ಟಿಗೆ ಕಳುಹಿಸುವ ಕಾರ್ಯಕ್ರಮ ಪೋಲೀಸರು ಹಾಕಬೇಕು. ಅದನ್ನು ಬಿಟ್ಟು ಏನು ಮಾಡಿದ್ದಾರೆ ಎಂದರೆ, ದೂರನ್ನು ಕೊಟ್ಟಿದ್ದರೂ ಪೋಲೀಸ್ ಸ್ಟೇಷನ್‌ನಲ್ಲಿ ದಬಾಯಿಸಿ ಓಡಿಸಿ ಬಿಟ್ಟಿದ್ದಾರೆ. ನೋಡಿ ಕಂಪ್ಲೇಂಟ್ ಕೊಡುವುದಕ್ಕೆ ಹೋದರೆ ಈ ರೀತಿ ಆಗಿದೆ. ಹಿಂದೆ ಇದರ ಬಗ್ಗೆ ಎಷ್ಟೋ ಸಲ ಮಾತನಾಡಿದ್ದೇವೆ. ಕಂಪ್ಲೇಂಟ್ ಕೊಡುವುದಕ್ಕೆ ಹೋದವರನ್ನೇ ಒಳಗೆ ಹಾಕಿಕೊಂಡು ಬಿಟ್ಟಿದ್ದಾರೆ. ಯಾರಮೇಲೆ ಕಂಪ್ಲೇಂಟ ಕೊಡುತ್ತೇವೆ, ಅವರನ್ನು ಅರೆಸ್ಟ್ ಮಾಡುವುದಂತೂ ಬೇರೆ ವಿಚಾರ. ಆದರೆ ಕಂಪ್ಲೇಂಟ್ ಕೊಡುವುದಕ್ಕೆ ಹೋದವನನ್ನೇ ಒಳಗೆ ಹಾಕಿಕೊಂಡು ಬಿಡುವುದು. ಕಂಪ್ಲೇಟ್ ರಿಜಿಸ್ಟರ್ ಮಾಡಿಕೊಳ್ಳುವುದಕ್ಕೆ ಲಂಚ ಬಿಡುಗಡೆ ಮಾಡುವುದಕ್ಕೆ ಲಂಚ. ಆಮೇಲೆ ಕೆಲವು ಜನ ಬಂದರು. ಇಂಥಿಂಥವರು ಮಾಡಿದ್ದಾರೆ ಎನ್ನುವಂತಹದ್ದನ್ನು ಪತ್ತೆಮಾಡಿದರು, ಆ ಹೆಣ್ಣುಮಗಳನ್ನೂ ಕೇಳಿ, ಇಂಥಿಂಥವರು ಈ ರೀತಿ ಮಾಡಿದ್ದಾರೆ ಎಂದು, ಜನರು ಪೋಲೀಸ್ ಸ್ಟೇಷನ್‌ಗೆ ಹೇಳುವುದಕ್ಕೆ ಹೋದರೆ, ಅವರನ್ನು ತೋರಿಸುವುದಕ್ಕೆ ಹೋದರೆ, ತೋರಿಸುವುದಕ್ಕೆ ಹೋದವರ ಮೇಲೆ ದರೋಡೆ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಯಾವ ಜನ ತೋರಿಸುವುದಕ್ಕೆ ಹೋದರೋ ಅವರಮೇಲೆ ಮಾಡಿದ್ದಾರೆ. ಜಾಲಪ್ಪನವರೇ ಈ ವಿಚಾರ ಈಗಾಗಲೇ ತಮಗೆ ಬಂದಿರಬಹುದು. ಅವರು ಗುಂಪಾಗಿ ಬಂದು ಬಿಟ್ಟರು ಎಂದು ೧೫, ೧೪೨, ೩೪ ಸೆಕ್ಷನ್‌ಗಳನ್ನು ಹಾಕಿ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಅತ್ಯಾಚಾರ ಆದಂಥ ಹೆಣ್ಣುಮಗಳನ್ನು ಆಸ್ಪತ್ರೆಗೆ ದಾಖಲು ಮಾಡಿದ್ದರು, ಅವಳು ಎರಡುಮೂರು ದಿವಸ ಪ್ರಜ್ಞೆ ಇಲ್ಲದೆ ಬಿದ್ದಿದ್ದಳು. ಕಂಪ್ಲೇಂಟ್ ಕೊಡುವುದನ್ನು ಎರಡು ಮೂರು ದಿವಸ ಲೇಟ್ ಮಾಡಿದ್ದಾರೆ ಆದರೂ ಕಂಪ್ಲೆಂಟ್ ಕೊಡುವುದು ಅಷ್ಟು ಸುಲಭ ಅಲ್ಲ. ಕಂಪ್ಲೇಂಟ್ ಕೊಟ್ಟಮೇಲೆ ಆವರು ಆ ಊರಿನಲ್ಲಿ ಉಳಿದುಕೊಳ್ಳಬೇಕಲ್ಲ. ಉಳಿದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ, ಈ ದೃಷ್ಟಿಯಿಂದ ಈ ಘಟನೆ ೨ನೇ ತಾರೀಖು ನಡೆದಿದ್ದರೂ ಸಹ ಕಂಪ್ಲೇಂಟ್ ಕೊಟ್ಟಿರುವುದು ೫-೬ ದಿವಸ ಆನಂತರ. ಆಮೇಲೆ ಈ ಕೇಸನ್ನು ವಾಪಸ್ ತೆಗೆದುಕೊಳ್ಳಿ, ೫೦ ರೂಪಾಯಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಎಷ್ಟು ಚೀಪ್ ರೇಟ್, ಸಮಾಜದಲ್ಲಿ ಇಂತಹ ವರ್ಗಗಳಿಗೆ ೫೦ ರೂಪಾಯಿ ೫೦೦ರೂಪಾಯಿ ಲಂಚ ಕೊಡುವುದು ಬೇರೆ, ಆದರೆ ಅತ್ಯಾಚಾರ ಆದಂಥ ಹೆಣ್ಣುಮಗಳಿಗೆ ೫೦ ರೂಪಾಯಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಇವರು ಕೂಲಿ ಮತ್ತೊಂದು ಮಾಡಿಕೊಂಡು ಜೀವನ ಮಾಡುವಂತಹ ಜನ. ದಿನಕ್ಕೆ ೪-೫ ರೂಪಾಯಿ ಸಿಕ್ಕರೆ ಅದೇಹೆಚ್ಚು. ೧೦ ರೂಪಾಯಿನ ಐದು ನೋಟನ್ನು ಕೊಟ್ಟರೆ ಸಾಕು, ಐದುನೂರು ಸಾವಿರ ಪತಕಕ್ಕೆ ಯೋಚನೆ ಮಾಡುತ್ತಾರೆ ಎಂದು ಈ ರೀತಿ ಮಾಡಿದ್ದಾರೆ. ಇಂತಹ ವಿಚಾರಧಾರೆ ನಮ್ಮ ಸಮಾಜದಲ್ಲಿ ಇದೆ.

ಪಿ.೩೦ ಪಿ.ಎಂ.

ಮಾನ್ಯ ಸಭಾಧ್ಯಕ್ಷರೇ, ನಾನು ವಿವರಕ್ಕೆ ಹೋಗುವುದಿಲ್ಲ. ಈ ಎಲ್ಲಾ ವಿಷಯಗಳು ಸರ್ಕಾರದ ಗಮನಕ್ಕೆ ಬಂದಿದ್ದರೆ ಈಗಲೇ ಉತ್ತರವನ್ನು ಕೊಡಲಿ. ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮಾಡಿದವರ ಮೇಲೆ ಕೇಸ್ ರಿಜಿಸ್ಟರ್ ಮಾಡಿಕೊಳ್ಳಲಿಲ್ಲ ಎಂದರೆ ನಿಮ್ಮ ವರ್ಗದ ಜನರ ಪರಿಸ್ಥಿತಿ ಏನಾಗಬಹುದು ಎಂಬುದನ್ನು ತಾವು ಯೋಚನೆ ಮಾಡಬೇಕು. ಪದೇ ಪದೇ ಅತ್ಯಾಚಾರ ವಾಗುತ್ತಿರುವುದನ್ನು ತಡೆಯುವುದಕ್ಕೆ ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ನೀವು ಇದರ ಬಗ್ಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರೋ ಅದು ಇದುವರೆಗೂ ನಮಗೆ ಗೊತ್ತಾಗಿಲ್ಲ. ದರೋಡೆಗಳು ನಡೆಯುತ್ತಲೇ ಇವೆ, ರಾಮನಗರದಲ್ಲಿ ನಡೆಯಿತು, ಗುಲ್ಬರ್ಗಾದಲ್ಲಿ ನಡೆಯಿತು ಹೀಗೆ ಎಲ್ಲಾ ಕಡೆಯೂ ಒಂದಲ್ಲಾ ಒಂದು ತರಹ ದರೋಡೆ ಅತ್ಯಾಚಾರ ನಡೆದೇ ಇವೆ. ಯಾವ ಜಿಲ್ಲೆಯಲ್ಲಿ ನಡೆದಿಲ್ಲ ಎಂಬುದನ್ನು ನೀವೇ ಹೇಳಿ ನೋಡೋಣ. ಬೆಳಗಾವಿ ಜಿಲ್ಲೆಯ ಬೆಂಡಿಗೇರಿಯಲ್ಲಿ ಯಾವ ತರದ ಶಿಕ್ಷೆಯನ್ನು ನಿಮ್ಮ ವರ್ಗದವರಿಗೆ ಕೊಟ್ಟಿದ್ದಾರೆಂದು ನಾವು ವಿವರವಾಗಿ ತಿಳಿಸಿದ್ದೇವೆ. ಚಿತ್ರದುರ್ಗ ತಾಲ್ಲೂಕಿನ 'ಕಾಸರ್ ಸಿರಸಿಗಿ' ಯಲ್ಲೂ ದೌರ್ಜನ್ಯ ನಡೆದಿದೆ. ಹೋದ ವರ್ಷ ರಾಯಚೂರು ಜಿಲ್ಲೆಯ ಕಂದುರೆಮೋತಿ ಪ್ರಕರಣ ನಡೆದಾಗ ಯಾವ ರೀತಿ ಒಂದು ಸದನದ ಸಮಿತಿಯನ್ನು ರಚನೆ ಮಾಡಿ

ವರದಿಯನ್ನು ಪಡೆಯಲಾಗಿತ್ತೋ, ಅದೇ ರೀತಿಯಲ್ಲಿ ಒಂದು ಸದನದ ಸಮಿತಿಯನ್ನು ಮಾಡಿ ಇಲ್ಲಿ ನಡೆದಿರುವ ದೌರ್ಜನ್ಯಗಳ ಬಗ್ಗೆ ವರದಿಯನ್ನು ತರಿಸಿಕೊಳ್ಳುವುದು ಸೂಕ್ತವೆಂದು ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಯಾವಾಗಲೂ ಈ ರೀತಿ ನೂರೆಂಟ್ ಪ್ರಕರಣಗಳು ನಡೆಯುತ್ತಲೇ ಇವೆ. ಈ ದೌರ್ಜನ್ಯಗಳನ್ನು ಪರಿಣಾಮಕಾರಿಯಾಗಿ ತಡೆಯುವುದಕ್ಕೆ ಪೋಲೀಸ್ ಇಲಾಖೆ ಸಂಪೂರ್ಣ ವಿಫಲವಾಗಿದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನೀವು ನಿಮ್ಮ ಪೋಲೀಸ್ ಇಲಾಖೆಯ ಮೇಲೆ ಸಂಪೂರ್ಣ ಹತೋಟಿಯನ್ನು ತೆಗೆದುಕೊಳ್ಳದಿದ್ದರೆ ಕೆಟ್ಟ ಹೆಸರು ನಿಮಗೆ ಬರುತ್ತದೆ. ರಾಜಕೀಯ ಕಾರಣಗಳಿಗೆ, ಹಾಗು ಇನ್ನಿತರ ಕಾರಣಗಳಿಗೆ ಪೋಲೀಸ್ ಇಲಾಖೆಯಲ್ಲಿ ದಕ್ಷತೆ ಕಡಿಮೆಯಾಗುತ್ತಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ನಡೆದಿರುವ ದೌರ್ಜನ್ಯಗಳ ಪಟ್ಟಿಯನ್ನು ಕೊಡುತ್ತೇವೆ. ಅದರ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಿ. ಮನುಷ್ಯರಿಗೆ ಮಲವನ್ನು ತಿನ್ನಿಸತಕ್ಕ ವಿಚಾರ This is not a small matter. Please think over that. There is nothing wrong if you agree to this proposal of constituting a House Committee. Let that Committee go to the spot, have an assessment made and report back to both the Houses of Legislature. ಬೆಂಡಿಗೇರಿ ಮತ್ತು ಜೇವರ್ಗಿ ತಾಲ್ಲೂಕಿನಲ್ಲಿ ಆಗಿರುವ ದೌರ್ಜನ್ಯಗಳ ಬಗ್ಗೆ ವರದಿ ಕೊಡುವುದಕ್ಕೆ ಒಂದು ಸದನ ಸಮಿತಿಯನ್ನು ಮಾಡಿ ಎಂದು ಕೇಳುತ್ತಿದ್ದೇವೆ. ಸದನದ ಸಮಿತಿಯನ್ನು ಮಾಡಬೇಕೆಂಬ ನಮ್ಮ ಬೇಡಿಕೆ ಏನು ಇದೆಯೋ ಅದನ್ನು ಮಾಡಬೇಕೆಂದು ಒತ್ತಾಯ ಮಾಡಿ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರ.—ಮಾನ್ಯ ಬಿ. ಲಕ್ಕಪ್ಪನವರು ಮಾತನಾಡಬೇಕಂ.

ಶ್ರೀ ಬಿ. ಲಕ್ಕಪ್ಪ.—ಅಜೆಂಡಾ ಪ್ರಕಾರ ನೀವು ನನ್ನ ಹೆಸರನ್ನು ಮೊದಲೇ ಕರೆಯಬೇಕಾಗಿತ್ತು. ನೀವು ಕರೆಯದಿದ್ದನ್ನು ಪ್ರತಿಭಟಿಸಿ ನಾನು ಮಾತನಾಡುವುದಿಲ್ಲ.

ಉಪಾಧ್ಯಕ್ಷರು.—ಅದರಿಂದ ಏನೂ ಪ್ರಯೋಜನವಾಗಿಲ್ಲ. ಮಾತನಾಡಿ

ಶ್ರೀ ಬಿ. ಲಕ್ಕಪ್ಪ.—ಅಜೆಂಡಾ ಪ್ರಕಾರ ನನ್ನ ಹೆಸರು ಎರಡನೆಯದು.

ಉಪಾಧ್ಯಕ್ಷರ.—ನಿಮ್ಮ ಪಕ್ಷದ ಸದಸ್ಯರೇ ಮಾತನಾಡಿದ್ದಾರೆ. ತಾವು ಸದನಕ್ಕೆ ಗೌರವ ಕೊಡಬೇಕಂ. ನಿಮ್ಮ ಸಿಟ್ಟನ್ನು ತೋರಿಸಬೇಕಾದರೂ ಅದನ್ನು ಗೌರವಯುತವಾಗಿ ತೋರಿಸಬೇಕ್ಕು.

ಶ್ರೀ ಬಿ. ಲಕ್ಕಪ್ಪ.—ನಮ್ಮ ಪಕ್ಷದಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ನನ್ನ ಹೆಸರನ್ನು ಕರೆಯುವಾಗ

* * *

ಉಪಾಧ್ಯಕ್ಷರು.—ಮಾನ್ಯ ಧರ್ಮಸಿಂಗ್‌ರವರಿಗೆ ಮತ್ತು ಮಾನ್ಯ ಬಂಗಾರಪ್ಪನವರಿಗೆ ಮೊದಲು ಅವಕಾಶ ಕೊಡಬೇಕೆಂದು ನಾನು ಅವರನ್ನು ಕರೆಯಲಿಲ್ಲ. ಮೊದಲೂ ನಾವೇ ಮಾತನಾಡುತ್ತೇವೆಂದು ಅವರು ಹೇಳಿದ್ದಕ್ಕೆ ಅವಕಾಶ ಕೊಟ್ಟಿದ್ದೇನೆ. ತಾವು ಈಗಲಾದರೂ ಮಾತನಾಡಿ.—ಆಮೇಲೆ, ಮಾನ್ಯ ಲಕ್ಕಪ್ಪನವರು "ತಾರತಮ್ಯ" ಎನ್ನುವ ಬಳಸಿರುವ ಶಬ್ದ ಅನ್‌ಪಾರ್ಲಿಮೆಂಟರಿಯಾಗಿರುತ್ತದೆ. ಅದನ್ನು Expunge ಮಾಡುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ನಾನು ಆಗ ನನ್ನ ಸರದಿ ಬಂದಾಗ ಎದ್ದು ನಿಂತಿದ್ದೆನು. ನನ್ನ ಹೆಸರು ಇತ್ತು.

ಉಪಾಧ್ಯಕ್ಷರು.—ನಿಮ್ಮನ್ನು ಬಿಟ್ಟು ಬೇರೆಯವರಿಗೂ ಕೊಟ್ಟಿಲ್ಲ. ನಿಮ್ಮ ಪಕ್ಷದ ಸದಸ್ಯರಿಗೆ ಕೊಟ್ಟಿದ್ದೇನೆ. ನಿಮ್ಮ ಪಕ್ಷದ ಸದಸ್ಯರು ಒತ್ತಾಯ ಮಾಡಿದ್ದರಿಂದ ಹಾಗೆ ಕೊಟ್ಟಿದ್ದೇನೆ. ತಾವಾಗಲಿ ಬೇಕಾದರೆ ಈಗ ಮಾತನಾಡಲು ಅವಕಾಶ ಇದೆ. ತಾವು ಮಾತನಾಡದಿದ್ದರೆ ಬೇರೆ ಸದಸ್ಯರನ್ನು ಕರೆಯುತ್ತೇನೆ. ಈಗ ಮಾನ್ಯ ಸದಸ್ಯರಾದ ಶ್ರೀ ವೀರಪ್ಪ ಮೊಯಿಲಿಯವರು ಮಾತನಾಡಿ.

---

*Expunged as ordered by the Chair.